ವಿಷಯಾನುಕ್ರಮಣಿಕೆ

ಶ್ರೀಸದಾಶಿವೇಂದ್ರಸರಸ್ವತೀವಿರಚಿತ

# ಆತ್ಮವಿದ್ಯಾವಿಲಾಸ

(ಕೆಲವು ಕೀರ್ತನೆಗಳೊಡನೆ)

ಮತ್ತು

ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತೀವಿರಚಿತ

# ಸದಾಶಿವೇನ್ದ್ರಸ್ತುತಿ

(ಭಾವಾರ್ಥಟಿಪ್ಪಣಿಗಳೊಡನೆ)

ಅನುವಾದಕರು:

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಪ್ರಕಾಶಕರು:

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

2005

## ವೇದಾಂತದ ಕೆಚ್ಚನ್ನು ಬಿಚ್ಚಿತೋರಿಸುವ ಕೆಲವು ಪುಟ್ಟ ಪುಸ್ತಕಗಳು

2. **ಆತ್ಮ ವಿದ್ಯಾವಿಲಾಸ ಮತ್ತು ಸದಾಶಿವೇಂದ್ರಸ್ತುತಿ : ? :** ಶ್ರೀ ಸದಾಶಿವೇಂದ್ರಸರಸ್ವತಿಗಳೆಂಬ ದೇಶಿವರ್ಯರು ಬರೆದಿರುವ ಪ್ರಕರಣವಿದು. ಆತ್ಮಸಾಕ್ಷಾತ್ಕಾರವನ್ನು ಹೊಂದಿರುವ ಮನಃಸ್ಥಿತಿಯನ್ನು ಉತ್ತಮ ರೀತಿಯಲ್ಲಿ ವರ್ಣಿಸುತ್ತದೆ. ಮುಮುಕ್ಷುಗಳಿಗೆ ಅನುಸಂಧಾನಕ್ಕೆ ತಕ್ಕದ್ದು. ಶೃಂಗೇರಿಯ ಪೀಠಾಧಿಪರಾಗಿದ್ದ **ಶ್ರೀ ಸಚ್ಚಿದಾನಂದ ಶಿವಾಭಿನವಸಿಂಹಭಾರತೀಸ್ವಾಮಿಗಳು** ಬರೆದಿರುವ 'ಸದಾಶಿವೇಂದ್ರ ಸ್ತುತಿ ಮತ್ತು **ಸದಾಶಿವಪಂಚರತ್ನ** ಎಂಬ ಎರಡು ಸ್ತೋತ್ರಗಳನ್ನು, ಕೆಲವು ಕೀರ್ತನೆಗಳನ್ನೂ ಇದರ ಜತೆಗೆ ಸೇರಿಸಿದೆ. ಮೂಲ, ಶ್ಲೋಕಗಳು, ಭಾವಾರ್ಥ, ಟಿಪ್ಪಣಿ - ಇವುಗಳಲ್ಲದೆ ಶ್ರೀ**ಸದಾಶಿವೇಂದ್ರ** ಸರಸ್ವತಿಗಳವರ ವೃತ್ತಾಂತವನ್ನು ಸೇರಿಸಿದೆ. **ಈಗ ಇದು ನಿಮ್ಮ ಕೈಯಲ್ಲಿದೆ.**

**(ನಾಲ್ಕನೆಯ ಮುದ್ರಣ: 2005, ಪು. ಡೆ. 12 + 44)**

2. **ವೇದಾಂತಬಾಲಬೋಧೆ :** ವೇದಾಂತ ವಿಚಾರವನ್ನು ಮೊಟ್ಟಮೊದಲು ಪ್ರಾರಂಭಿಸಬೇಕೆನ್ನುವವರಿಗೆ ಉಪಯುಕ್ತವಾಗಿರುವ ಪುಟ್ಟ ಹೊತ್ತಿಗೆಯಿದು. ಶ್ರೀಶಂಕರಭಗವತ್ಪಾದರವರ **ಪ್ರಾತಃಸ್ಮರಣಸ್ತೋತ್ರ**ದ ಸಂಸ್ಕೃತಮೂಲ, ಅದಕ್ಕೆ ಪ್ರತಿಪದಾರ್ಥ ಮತ್ತು ಶ್ಲೋಕಗಳ ಅಭಿಪ್ರಾಯವನ್ನು ವಿಶದಗೊಳಿಸುವ ಗುರುಶಿಷ್ಯ ಸಂಭಾಷಣಾರೂಪವಾದ ವ್ಯಾಖ್ಯಾನ - ಇಷ್ಟೂ ಇದರಲ್ಲಿವೆ. ಕೊನೆಯಲ್ಲಿ ಪಾರಿಭಾಷಿಕ ಶಬ್ದಗಳ ಅರ್ಥವನ್ನು ವಿವರಿಸುವ ಶಬ್ದಾನುಕ್ರಮಣಿಕೆಯಿದೆ.

**(ಐದನೆಯ ಮುದ್ರಣ: 2005, ಪು. ಡೆ. 8 +40)**

3. **ವೇದಾಂತಪ್ರವೇಶಿಕೆ :** ಶ್ರೀ ಶಂಕರಾಚಾರ್ಯರವರ ಅದ್ವೈತ ಪಂಚರತ್ನದ ಮೂಲ, ಪ್ರತಿಪದಾರ್ಥ, ತಾತ್ಪರ್ಯ, ವಿವರಣೆಗಳು - ಇಷ್ಟನ್ನೂ ಒಳಗೊಂಡಿರುವ ಪ್ರಕರಣವಿದು. ನಮ್ಮಗಳ ಆತ್ಮನು ಸರ್ವಸಂಸಾರಧರ್ಮ ರಹಿತನಾದ ಸಚ್ಚಿದಾನಂದನು, ಪ್ರಪಂಚವು ಆತ್ಮನಿಗಿಂತ ಬೇರೆಯಾಗಿರುವದೇ ಇಲ್ಲ - ಎಂಬುದನ್ನು ಸಯುಕ್ತಿಕವಾಗಿ ಮನಗಾಣಿಸು ತ್ತದೆ. ವೇದಾಂತಬಾಲಬೋಧೆಯನ್ನು ಓದಿದ ಬಳಿಕ ಇದನ್ನು ಓದಿದರೆ **ಉಪದೇಶಸಾಹಸ್ರಿ** (ಗದ್ಯ) ಅಥವಾ **ಪರಮಾರ್ಥಚಿಂತಾಮಣಿ** - ಮುಂತಾದ ಗ್ರಂಥಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳ ಬಹುದಾಗುವದು. **(ನಾಲ್ಕನೆಯ ಮುದ್ರಣ: 2005, ಪು. ಡೆ. 6+ 64)**

**ಪುಸ್ತಕಗಳ ಬೆಲೆ ಪಟ್ಟಿಗೆ ಸಂಪರ್ಕಿಸಿ.**

ಹೊ.ನ.ಪುರ. 08175-273820 ಬೆಂ. 080 -26765548

ಅಧ್ಯಾತ್ಮಗ್ರಂಥಾವಳಿ

ಶ್ರೀಸದಾಶಿವೇಂದ್ರಸರಸ್ವತೀವಿರಚಿತ

# ಆತ್ಮವಿದ್ಯಾವಿಲಾಸ

(ಕೆಲವು ಕೀರ್ತನೆಗಳೊಡನೆ)

ಮತ್ತು

ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತೀವಿರಚಿತ

# ಸದಾಶಿವೇನ್ದ್ರ ಸ್ತುತಿ

(ಭಾವಾರ್ಥಟಿಪ್ಪಣಿಗಳೊಡನೆ)

ಅನುವಾದಕರು:

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ. 49

ಪ್ರಕಾಶಕರು:

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

2005

ಮೊದಲನೆಯ ಮುದ್ರಣ : 1934 - 1000 ಪ್ರತಿಗಳು
ತಿದ್ದಿದ ಎರಡನೆಯ ಮುದ್ರಣ : 1952 - 1000 ಪ್ರತಿಗಳು
ಮೂರನೆಯ ಮುದ್ರಣ : 1990 - 1000 ಪ್ರತಿಗಳು
ನಾಲ್ಕನೆಯ ಮುದ್ರಣ : 2005 - 1000 ಪ್ರತಿಗಳು

ಪುಟಗಳು : 12 + 44

**ಬೆಲೆ : ರೂ. 10/-**

**ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು**

**All Rights Reserved**

ಅಕ್ಷರ ಜೋಡಣೆ
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ.45, ನೇತಾಜಿ ರಸ್ತೆ, 3ನೇ ಮುಖ್ಯರಸ್ತೆ
ತ್ಯಾಗರಾಜನಗರ, ಬೆಂಗಳೂರು - 28
ದೂ: 26764650

ಮುದ್ರಣಕಾರರು :
**ಶ್ರೀ ಗಣೇಶ ಮಾರುತಿ ಪ್ರಿಂಟರ್ಸ್**
ನಂ. 76, 6ನೇ ಮುಖ್ಯರಸ್ತೆ
3ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು - 560 028
ದೂ. : 26766342

# ಮುನ್ನುಡಿ

## ( ಒಂದನೆಯ ಮುದ್ರಣಕ್ಕೆ )

ಶ್ರೀಪರಮಶಿವೇಂದ್ರಸರಸ್ವತಿಗಳ ಶಿಷ್ಯರಾದ ಶ್ರೀಸದಾಶಿವೇಂದ್ರಸರಸ್ವತಿಗಳು ವೇದಾಂತದಲ್ಲಿ ಮಹಾಪಂಡಿತರಾಗಿದ್ದುದಲ್ಲದೆ ಮಹಾಯೋಗಿಗಳೂ ಆಗಿದ್ದರೆಂದು ತಿಳಿಯಬರುತ್ತದೆ. ಇವರು ರಚಿಸಿರುವ ಬ್ರಹ್ಮಸೂತ್ರವೃತ್ತಿ, ಸಿದ್ಧಾಂತಕಲ್ಪವಲ್ಲಿ - ಎಂಬ ಎರಡು ಗ್ರಂಥಗಳೂ ಶ್ರೀರಂಗದ ವಾಣಿವಿಲಾಸ ಮುದ್ರಣಾಲಯದಲ್ಲಿ ಪ್ರಕಾಶಿತವಾಗಿವೆ ; ಇವರು ಮಾಡಿರುವ ಕೆಲವು ಸಂಸ್ಕೃತ ಕೀರ್ತನೆಗಳನ್ನೊಳಗೊಂಡ ಒಂದು ಚಿಕ್ಕ ಪುಸ್ತಕವೂ ಅದೇ ಮುದ್ರಣಾಲಯದಲ್ಲಿ ಪ್ರಕಟಿತವಾಗಿದೆ. ಇವರ ಯೋಗಮಹಿಮೆಯನ್ನು ಕೊಂಡಾಡುವ ಅನೇಕ ದಂತಕಥೆಗಳಿವೆ.

ಸದಾಶೀವೇಂದ್ರರು ಕೊನೆಕೊನೆಗೆ ಮೌನವ್ರತಧಾರಿಗಳಾಗಿ ಆತ್ಮವಿದ್ಯಾವಿಲಾಸದಲ್ಲಿ ವರ್ಣಿತವಾಗಿರುವ ತತ್ತ್ವಾನುಸಂಧಾನ ಕ್ರಮವನ್ನೇ ಅನುಸರಿಸುತ್ತಾ ಇದ್ದರೆಂದೂ ಆ ಸ್ಥಿತಿಯಲ್ಲಿ ಪುದುಕೋಟೆಯ ರಾಜರೊಬ್ಬರಿಗೆ ದರ್ಶನವನ್ನು ಕೊಟ್ಟು ಅವರು ಮಾಡಿದ ಉಪದೇಶದ ಸ್ಮರಣೆಯು ಈಗಲೂ ಅಲ್ಲಿಯ ಅರಮನೆಯಲ್ಲಿ ನಡೆದುಕೊಂಡು ಬಂದಿದೆಯೆಂದೂ ಹೇಳುವರು.

ಶ್ರೀಶೃಂಗಗಿರಿಯ ಪೀಠಾಧಿಪರಾಗಿದ್ದು ಬ್ರಹ್ಮೀಭೂತರಾದ ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹಭಾರತೀಸ್ವಾಮಿಗಳವರು ಇವರನ್ನು ಬಹುವಾಗಿ ಕೊಂಡಾಡಿ ಸ್ತೋತ್ರಗಳನ್ನು ಮಾಡಿರುತ್ತಾರೆ. ಸದಾಶಿವೇಂದ್ರಸ್ತುತಿಯೆಂಬ ಹೆಸರಿನಿಂದ ಅವರು ರಚಿಸಿರುವ ಒಂದು ಪ್ರಕರಣವನ್ನೂ ಇದಕ್ಕೆ ಜೋಡಿಸಿರುತ್ತದೆ. ಸದಾಶಿವೇಂದ್ರರು ವರ್ಣಿಸಿರುವ ಜೀವನ್ಮುಕ್ತಲಕ್ಷಣಕ್ಕೆ ಅವರೇ ಉದಾಹರಣೆಯಾಗಿದ್ದಾರೆಂಬುದು ಈ ಸ್ತೋತ್ರದಿಂದ ಹೊರಪಡುವಂತಿದೆ.

ಇಂಥ ಅನುಭವಿಗಳ ಕೃತಿಯಾದ ಈ ಪ್ರಕರಣವು ಪಾಠಕರಿಗೆ ನಮ್ಮೆಲ್ಲರ ಆತ್ಮನಾಗಿರುವ ಪರಬ್ರಹ್ಮಸ್ವರೂಪದ ನೆನಪನ್ನು ತಂದುಕೊಡುವುದಕ್ಕೆ ಸಹಾಯವಾದೀತೆಂದು ನಂಬಿ ಇದನ್ನು ಅನುವಾದ ಸಹಿತವಾಗಿ ಪ್ರಕಟಿಸಲಾಗಿದೆ.

ಭಾವ, ಭಾದ್ರಪದ ಶುದ್ಧ, ೬ — **ಸಂಪಾದಕ**

14-9-1934 — **(ವೈ. ಸುಬ್ಬರಾವ್)**

## ಎರಡನೆಯ ಸಂಸ್ಕರಣಕ್ಕೆ ಪೀಠಿಕೆ

ಹದಿನೆಂಟು ವರ್ಷಗಳ ಕೆಳಗೆ ಅಚ್ಚುಮಾಡಿಸಿದ್ದ ಈ ಪುಸ್ತಕದ ಪ್ರತಿಗಳೆಲ್ಲ ಮುಗಿದುಹೋಗಿದ್ದದ್ದರಿಂದ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳಿಂದ ಈ ಮುದ್ರಣವನ್ನು ಸರಿಯಾಗಿ ತಿದ್ದುಪಡಿ ಮಾಡಿಸಿ ಪರಿಷ್ಕರಿಸಿರುತ್ತದೆ. ಮೂಲದ ಅಭಿಪ್ರಾಯವು ಸ್ಪಷ್ಟವಾಗುವದಕ್ಕೆ ಬೇಕಾದ ಟಿಪ್ಪಣಿಗಳನ್ನು ಅಲ್ಲಲ್ಲಿಗೆ ಶ್ರೀಗಳವರು ಕೊಟ್ಟಿರುವುದರಿಂದ ಗ್ರಂಥದ ಪ್ರಯೋಜನವು ವಾಚಕರಿಗೆ ಮೊದಲಿಗಿಂತಲೂ ಮಿಗಿಲಾಗುವ ದೆಂದು ನಮ್ಮ ನಂಬಿಕೆ.

ಶ್ರೀಸದಾಶಿವೇಂದ್ರಸರಸ್ವತಿಗಳವರ ಸಂಕ್ಷಿಪ್ತಚರಿತ್ರೆಯನ್ನೂ ಅವರ ಕೆಲವು ಕೀರ್ತನೆಗಳನ್ನೂ ಈ ಹೊಸ ಸಂಸ್ಕರಣದಲ್ಲಿ ಸೇರಿಸಿರುತ್ತೇವೆ. ಇದರ ಲಾಭವನ್ನು ಮುಮುಕ್ಷುಗಳು ಪಡೆಯುವಂತೆ ಅನುಗ್ರಹಿಸಿರೆಂದು ಶ್ರೀಸದಾಶಿವಬ್ರಹ್ಮೇಂದ್ರರನ್ನೇ ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ನಂದನ ಕಾರ್ತಿಕ ಬಹುಳ, ೩ **ಪ್ರಕಾಶಕರು**
31- 10- 1952

## ನಾಲ್ಕನೆಯ ಸಂಸ್ಕರಣಕ್ಕೆ ಪೀಠಿಕೆ

ಮೂರನೆಯ ಬಾರಿಗೆ 1990ರಲ್ಲಿ ಪ್ರಕಟವಾಗಿದ್ದ ಈ ಗ್ರಂಥದ ಪ್ರತಿಗಳು ಈಗ ಸಂಪೂರ್ಣವಾಗಿ ಮಾರಾಟವಾದ್ದರಿಂದ ತಪ್ಪುಗಳನ್ನು ತಿದ್ದಿ ನಾಲ್ಕನೆಯ ಮುದ್ರಣವನ್ನು ಹೊರತರಲಾಗಿದೆ. ಎಂದಿನಂತೆ ವಾಚಕರು ಪ್ರೋತ್ಸಾಹಿಸುವರೆಂದು ನಂಬಿದೆ.

ಶ್ರೀ ಪಾರ್ಥಿವ ಸಂವತ್ಸರ
ಆಶ್ವಯುಜ ಶುದ್ಧ ಪೂರ್ಣಿಮ **ಪ್ರಕಾಶಕರು**
(17- 10- 2005)

# ಶ್ರೀಸದಾಶಿವೇಂದ್ರಸರಸ್ವತಿಗಳವರ ವೃತ್ತಾಂತ

ಆತ್ಮವಿದ್ಯಾವಿಲಾಸದ ಕರ್ತೃಗಳಾದ ಶ್ರೀಸದಾಶಿವೇಂದ್ರಸರಸ್ವತೀ ಸ್ವಾಮಿಗಳವರು ಶ್ರೀಪರಮಶಿವೇಂದ್ರಸರಸ್ವತಿಗಳವರ ಶಿಷ್ಯರೆಂಬುದು ಈ ಗ್ರಂಥದಲ್ಲಿಯೇ (೩)* ಉಕ್ತವಾಗಿರುವದರಿಂದ ಅದರ ವಿಷಯಕ್ಕೆ ಯಾವ ಸಂದೇಹವೂ ಉಂಟಾಗುವದಿಲ್ಲ. ಇಂದ್ರಸರಸ್ವತಿ ಎಂಬ ಉಪಾಧಿಯು ಕಂಚಿಯ ಕಾಮಕೋಟಿಪೀಠದ ಸಂಪ್ರದಾಯದ ಯತಿಗಳ ಹೆಸರಿನ ಕೊನೆಯಲ್ಲಿ ಕಾಣಬರುತ್ತದೆ. ಪರಮಶಿವೇಂದ್ರರು ಆ ಪೀಠದಲ್ಲಿ ಕ್ರಿ.ಶ. ೧೫೩೯ ರಿಂದ ೧೫೮೬ರವರೆಗೆ ಅಧಿಷ್ಠಿತರಾಗಿದ್ದರೆಂದು ದಿವಾನ್ ಬಹದ್ದೂರ್ ಕೆ.ಎಸ್. ರಾಮ ಸ್ವಾಮಿಶಾಸ್ತ್ರಿಗಳವರು ಬರೆದಿರುತ್ತಾರೆ. ಆದರೆ ''ಗುರುರತ್ನಮಾಲಾ'' (ಅಥವಾ ಗುರುರಾಜರತ್ನಮಾಲಾ) ಎಂಬ ಹೆಸರಿನಿಂದ ಸದಾಶಿವೇಂದ್ರರಚಿತವೆಂದು ಪ್ರಸಿದ್ಧವಾಗಿರುವ ಪೀಠಪರಂಪರೆಯ ಆಚಾರ್ಯರುಗಳ ಪಟ್ಟಿಯಲ್ಲಿ ಪರಮಶಿವೇಂದ್ರರ ವರ್ಣನೆಯನ್ನು ಸದಾಶಿವೇಂದ್ರರು ಮಾಡಿರುವದಿಲ್ಲ ; ಆ ಗ್ರಂಥದ ವ್ಯಾಖ್ಯಾನಕರ್ತರಾದ ಆತ್ಮಬೋಧೇಂದ್ರಸರಸ್ವತೀಗಳವರೇ ಮಾಡಿರುತ್ತಾರೆ. ಇದಕ್ಕೆ ಕಾರಣವೇನೆಂಬುದು ತಿಳಿಯುವದಿಲ್ಲ. ಆತ್ಮಬೋಧರ ಪ್ರಾರ್ಥನೆಯಂತೆ ಸದಾಶಿವೇಂದ್ರರು ಆ ಸ್ತೋತ್ರಗ್ರಂಥವನ್ನು ರಚಿಸಿದರೆಂದು ಉಪಸಂಹಾರಶ್ಲೋಕದಲ್ಲಿದೆ. ಇಲ್ಲಿ ನಾವು ಬರೆದಿರುವ ಚರಿತ್ರಾಂಶಗಳಿಗೆ ಮುಖ್ಯವಾಗಿ ಶ್ರೀ ಶಾಸ್ತ್ರಿಗಳವರ ಲೇಖನವೇ ನಮಗೆ ಆಧಾರವಾಗಿರುತ್ತದೆ ಎಂದು ವಾಚಕರು ಗ್ರಹಿಸಬೇಕು.

ಸದಾಶಿವೇಂದ್ರರಿಗೆ 'ಸದಾಶಿವಬ್ರಹ್ಮಮ್' ಎಂಬ ಗೌರವದ ಹೆಸರನ್ನು ತಮಿಳು ಜನರು ಕೊಟ್ಟಿರುತ್ತಾರೆ ; ವೈರಾಗ್ಯಚಕ್ರವರ್ತಿಗಳಾಗಿದ್ದ ಶುಕರಿಗೆ ಮಾತ್ರ ಈ ಬ್ರಹ್ಮಮ್ ಎಂಬ ಹೆಸರನ್ನು ದ್ರಾವಿಡರು ಉಪಯೋಗಿಸಿರುತ್ತಾರೆ. ಇದ ರಿಂದ ಸದಾಶಿವೇಂದ್ರರ ವೈರಾಗ್ಯಶಿಖರದ ಉನ್ನತಿಯನ್ನು ವಾಚಕರು ಕಲ್ಪಿಸಿಕೊಳ್ಳಬಹುದಾಗಿದೆ. ಈ ವೈರಾಗ್ಯವು ಅವರಿಗೆ ಬಹಳ ಚಿಕ್ಕವಯಸ್ಸಿನಿಂದಲೇ ಸ್ವಭಾವದಿಂದ ಬಂದಿತ್ತೆಂಬುದನ್ನು ತಿಳಿಸುವ ಒಂದು ಕಥೆಯಿದೆ. ಅವರು ಹುಟ್ಟಿದ ಸ್ಥಲವು ಈಗಿನ ಕರೂರು ಬಳಿಯಲ್ಲಿ ಕಾವೇರೀತೀರದಲ್ಲಿದ್ದ ನೆರೂರ್ ಎಂಬ

---

★ ಸಂಖ್ಯೆಗಳು ಈ ಗ್ರಂಥದ ಶ್ಲೋಕದವು.

ಹಳ್ಳಿಯು. ಜನನಕಾಲವು ಸರಿಯಾಗಿಗೊತ್ತಾಗಿಲ್ಲ; ಹದಿನೇಳನೆಯ ಶತಮಾನದ ಕೊನೆಯ ಭಾಗದಲ್ಲಿಯೂ ಹದಿನೆಂಟನೆಯ ಶತಮಾನದ ಆದಿಭಾಗದಲ್ಲಿಯೂ ಅವರು ಜೀವಿಸಿದ್ದರೆಂದು ಹೇಳುತ್ತಾರೆ. ಅವರಿಗೆ ಜನ್ಮನಾಮವು ಶಿವರಾಮ ಕೃಷ್ಣಯ್ಯರ್. ಪಿಚ್ಚುಕುಪ್ಪಯ್ಯರ್ - ಎಂಬುದು ಅಡ್ಡಹೆಸರು. ತಂದೆಯು ಅವರ ಚಿಕ್ಕ ವಯಸ್ಸಿನಲ್ಲಿಯೇ ದೈವಾಧೀನರಾಗಿದ್ದರು ; ತಂಜಾವೂರ್ ಜಿಲ್ಲೆಯ ತಿರುವಿಸೈನಲ್ಲೂರಿನಲ್ಲಿ ತಾಯಿಯ ಪೋಷಣೆಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದರು. ಆಗಿನ ಕಾಲದ ಪದ್ಧತಿಯಂತೆ ಇನ್ನೂ ಸಣ್ಣವರಾಗಿದ್ದಾಗಲೇ ಅವರಿಗೆ ಮದುವೆಯಾಗಿತ್ತು. ಹೆಂಡತಿಯು ಪುಷ್ಪವತಿಯಾದಳೆಂಬ ಸುದ್ದಿ ಬಂದು ಆ ದಿನ ವಿಶೇಷವಾದ ಅಡುಗೆಯು ಮನೆಯಲ್ಲಿ ನಡೆಯುತ್ತಿದ್ದದ್ದರಿಂದ ಊಟವು ಸ್ವಲ್ಪತಡವಾಯಿತು. ಆದರೆ ಈ ಕಾಲವಿಳಂಬವು ನಮ್ಮ ಶಿವರಾಮ ಕೃಷ್ಣನಿಗೆ ಸಂಸಾರದ ಅಸಾರತೆಯ ವಿಚಾರವನ್ನು ತಂದುಕೊಟ್ಟಿತು. 'ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್' ಎಂಬ ಶ್ರುತಿವಚನದಂತೆ ಆ ದಿನವೇ ಅವರು ವಿರಕ್ತರಾಗಿ ಗುರುವನ್ನು ಹುಡಕಿಕೊಂಡು ಹೊರಟುಬಿಟ್ಟರಂತೆ!

ಮೇಲೆ ಹೇಳಿರುವ ಆತ್ಮಬೋಧೇಂದ್ರಸರಸ್ವತಿಗಳೂ ( ವಿಶ್ವಾಧಿಕೇಂದ್ರಸರಸ್ವತಿಗಳೆಂದೂ ಅವರ ಹೆಸರು), ಅಯ್ಯಾಲ್ (ಶ್ರೀಧರವೆಂಕಟೇಶ ಅಯ್ಯರ್), ರಾಮಭದ್ರದೀಕ್ಷಿತರು (ಇವರು ಸದಾಶಿವರ ತಂದೆಯ ಅಳಿಯಂದಿರು), ಭಾಷ್ಯಂ ಗೋಪಾಲಕೃಷ್ಣಶಾಸ್ತ್ರಿಗಳು - ಇವರೆಲ್ಲ ಸದಾಶಿವೇಂದ್ರರ ಸಹಪಾಠಿಗಳಾಗಿದ್ದರಂತೆ. ಒಂದಾನೊಂದು ಸಂದರ್ಭದಲ್ಲಿ ಕೆಲವು ಪಂಡಿತರನ್ನು ವಾಕ್ಯಾರ್ಥದಲ್ಲಿ ಇವರು ಸೋಲಿಸಲಾಗಿ ಅವರು ಪರಮಶಿವೇಂದ್ರರ ಬಳಿಗೆ ಹೋಗಿ ಇವರ ವಾದಸರಣಿಯ ವಿಷಯವಾಗಿ ದೂರುಹೇಳಿಕೊಂಡ ರಂತೆ. ಆಗ ಗುರುಗಳು ''ಸದಾಶಿವ, ನೀನು ಮೌನವಾಗಿರುವದನ್ನು ಎಂದಿಗೆ ಕಲಿಯುವೆ?'' ಎನ್ನಲು ''ಇಂದಿನಿಂದಲೇ'' ಎಂದು ಸದಾಶಿವೇಂದ್ರರು ಮೌನಿಗಳಾಗಿಬಿಟ್ಟರಂತೆ! ಆತ್ಮವಿದ್ಯಾವಿಲಾಸದಲ್ಲಿ ಮೌನೀ (೩೫,೩೬) ಎಂದು ಅವರು ವರ್ಣಿಸಿರುವ ಸ್ಥಿತಿಯು ಈ ಪ್ರತಿಜ್ಞೆಯ ಫಲವಾಗಿದ್ದು ತಮ್ಮ ಆತ್ಮಾನುಸಂಧಾನವನ್ನೇ ಪ್ರಕಟಿಸುತ್ತದೆ - ಎಂದರೂ ಹೇಳಬಹುದು. ಆತ್ಮವಿದ್ಯಾವಿಲಾಸದ ಕೈಬರಹದ ಪ್ರತಿಯನ್ನು ತಂಜಾವೂರಿನ ರಾಜನಾದ ಶರಭೋಜಿಗೆ ಕಳುಹಿಸಿ ಅವನಿಗೆ ಒಂದು ಪುತ್ರರತ್ನವಾಗಲೆಂದು ಸದಾಶಿವರು

ಹರಸಿದರೆಂದು ಒಂದು ಕಥೆಯಿದೆ ; ಆ ಕಥೆಯಲ್ಲಿ ಯಾವದಾದರೂ ನಿಜದ ಅಂಶವಿದ್ದರೆ ಅವರು ಕಳುಹಿಸಿದ ಗ್ರಂಥವು ಆತ್ಮವಿದ್ಯಾವಿಲಾಸವಾಗಿರಲಾರದು ಎಂದು ನಮಗೆನಿಸುತ್ತದೆ.

ತಿರುವಾಂಕೂರಿನ ರಾಜನಾದ ಕಾರ್ತಿಕತಿರುನಾಳ್ ಎಂಬಾತನು ವಸುಲಕ್ಷ್ಮಿ ಎಂಬ ರಾಣಿಯನ್ನು ಮದುವೆಯಾದದ್ದರ ಸ್ಮಾರಕವಾಗಿ ವಸುಲಕ್ಷ್ಮೀಕಲ್ಯಾಣವೆಂಬ ರೂಪಕವನ್ನು ಬರೆದರೆಂದೂ ರಾಮವರ್ಮ ಯಶೋಭೂಷಣವೆಂಬ ಅಲಂಕಾರಗ್ರಂಥವೊಂದನ್ನು ರಚಿಸಿದರೆಂದೂ ಹೇಳುತ್ತಾರೆ. ಆದರೆ ಸದಾಶಿವೇಂದ್ರರ ಆಬಾಲ್ಯವೈರಾಗ್ಯಕ್ಕೂ ಈ ಗ್ರಂಥರಚನೆಗೂ ಹೊಂದಿಕೆಯಾಗುವುದಿಲ್ಲ. ಆತ್ಮವಿದ್ಯಾವಿಲಾಸವಲ್ಲದೆ ಬ್ರಹ್ಮಸೂತ್ರವೃತ್ತಿ, ಯೋಗಸೂತ್ರವೃತ್ತಿ, ಸಿದ್ಧಾಂತಕಲ್ಪವಲ್ಲೀ, ಶಿವಯೋಗದೀಪಿಕೆ, ಶಿವಮಾನಸಪೂಜಾ; ಸಪರ್ಯಾಪರ್ಯಾಯಸ್ತವ, ಶ್ರೀದಕ್ಷಿಣಾಮೂರ್ತಿ ಧ್ಯಾನಮ್, ಬೋಧಾರ್ಯ, ನವಮಣಿಮಾಲಾ, ಆತ್ಮಾನುಸಂಧಾನಮ್, ಆತ್ಮನಿರ್ವೇದಸ್ತವಃ, ನವವರ್ಣರತ್ನಮಾಲಾ, ಸ್ವಪ್ನೋದಿತಮ್, ಮನೋನಿಯಮನಮ್, ಸ್ವಾನುಭೂತಿಪ್ರಕಾಶಿಕಾ, ಅದ್ವೈತರಸಮಂಜರೀ, ಬ್ರಹ್ಮಕೀರ್ತನತರಂಗಿಣೀ - ಎಂಬ ಗ್ರಂಥಗಳನ್ನು ಇವರು ರಚಿಸಿರುವದಾಗಿ ಪ್ರಸಿದ್ಧಿಯಿದೆ. ಈ ಗ್ರಂಥಗಳನ್ನು ಒಳಹೊಕ್ಕು ವಿಮರ್ಶೆಮಾಡಿದ ಮೇಲೆಯೇ ಯಾವಯಾವದು ನಿಜವಾಗಿ ಇವರ ಲೇಖನಿಯಿಂದ ಹೊರಟವುಗಳೆಂಬುದನ್ನು ನಿರ್ಣಯಿಸತಕ್ಕದ್ದಾಗಿದೆ.

ಸದಾಶಿವೇಂದ್ರರ ಯೋಗಸಿದ್ಧಿಗಳ ವಿಷಯದಲ್ಲಿ ಹಲವು ಕಥೆಗಳು ಹುಟ್ಟಿರುತ್ತವೆ. ಇವರು ಒಮ್ಮೆ ಕೋಡುಮಡಿ ಎಂಬಲ್ಲಿ ಸಮಾಧಿಸ್ಥರಾಗಿದ್ದಾಗ ಕಾವೇರಿಯ ಪ್ರವಾಹವು ಮೇಲೆ ಹರಿದುಬಂದಿತಂತೆ ; ಕೆಲವು ದಿನಗಳಾದ ಮೇಲೆ ಪ್ರವಾಹವು ಇಳಿದು ಬಳಿಕ ರೈತರು ಮರಳನ್ನು ಅಗೆಯುತ್ತಿರುವಲ್ಲಿ ರಕ್ತವು ಚಿಮ್ಮುತ್ತಿರುವದನ್ನು ಕಂಡು ಅವರ ಶರೀರವನ್ನು ಅಗೆದು ತೆಗೆದರಂತೆ. ಆದರೆ ಸದಾಶಿವೇಂದ್ರರು ನಿದ್ರೆಯಿಂದ ಎಚ್ಚತ್ತವರಂತೆ ಸುಮ್ಮನೆ ಎದ್ದು ಹೊರಟುಹೋಗಿಬಿಟ್ಟರಂತೆ! ಆತ್ಮವಿದ್ಯಾವಿಲಾಸದಲ್ಲಿ ನದಿಯ ಮಳಲೊಟ್ಟಲಿನ ಮೇಲೆ ಅಥವಾ ನದಿಯಲ್ಲಿರುವ ಬಂಡೆಯಮೇಲೆ ಜೀವನ್ಮುಕ್ತನು ಮಲಗಿರುತ್ತಾನೆಂಬ ವರ್ಣನೆಯು (೩೪, ೩೬) ಬಂದಿರುವದರಲ್ಲಿ ಇದರ

ಪರಾಮರ್ಶವೇನಾದರೂ ಇದೆಯೋ ಇಲ್ಲವೋ ಹೇಳುವದಕ್ಕೆ ಬರುವದಿಲ್ಲ. ಇನ್ನೊಮ್ಮೆ ಇವರು ಗದ್ದೆಯಲ್ಲಿ ಒಂದು ಬಣವೆಯ ಮೇಲೆ ಮಲಗಿದ್ದರಂತೆ ; ಗದ್ದೆಯವರು ಬಂದು ಯಾವನೋ ಕಳ್ಳನಿರಬೇಕೆಂದು ಕೈಯೆತ್ತಿದರೆ ಅದನ್ನು ಅಲುಗಾಡಿಸುವದಕ್ಕೂ ಆಗದೆ ಬೆಳಗಾಗುವವರೆಗೂ ಹಾಗೆಯೇ ನಿಲ್ಲಬೇಕಾಯಿತಂತೆ ! ಮತ್ತೂ ಒಮ್ಮೆ ಕಟ್ಟಿಗೆಯವರು ಕೆಲವರು ಕಾಡಿನಲ್ಲಿ ಇವರ ಮೇಲೆ ಕಟ್ಟಿಗೆಯನ್ನು ಹೊರಿಸಿಕೊಂಡು ಬಂದರಂತೆ ; ಯಾರೋ ರಾಜನ ಕಡೆಯವರು ಇವರನ್ನು ಬಿಟ್ಟಿಹಿಡಿದರೆಂದೂ ಹೇಳುತ್ತಾರೆ. ಹೊರೆಯನ್ನು ಇವರು ಕೆಳಕ್ಕೆ ಹಾಕುತ್ತಲೂ ಕಟ್ಟಿಗೆಗೆ ಬೆಂಕಿ ಹತ್ತಿಕೊಂಡು ಎಲ್ಲವೂ ಬೂದಿಯಾಯಿತಂತೆ ! ಒಂದಾನೊಂದು ಸಮಯದಲ್ಲಿ ಒಬ್ಬ ಭಕ್ತನು ಶ್ರೀರಂಗವನ್ನು ನೋಡಬೇಕೆಂದು ಇಚ್ಛಿಸಲು ಅವನನ್ನು ಇಚ್ಛಾಮಾತ್ರದಿಂದ ಅಲ್ಲಿಗೆ ಕರೆದೊಯ್ದು ಸದಾಶಿವೇಂದ್ರರು ಮಾಯವಾದರಂತೆ ! ತಿರುಚಂದೂರಿನಲ್ಲಿಒಂದು ಮಗುವನ್ನು ಬದುಕಿಸಿದರಂತೆ !

ಇವೆಲ್ಲ ಯೋಗಸಿದ್ಧಿಯ ಪ್ರದರ್ಶನಗಳೆಂಬುದರಲ್ಲಿ ಸಂಶಯವಿಲ್ಲ. ಸದಾಶಿವೇಂದ್ರರು ಪತಂಜಲಿಗಳ ಯೋಗಸೂತ್ರಕ್ಕೆ ವೃತ್ತಿಯೊಂದನ್ನೂ ಬರೆದಿರುತ್ತಾರೆ. ಆದರೆ ಈ ಸಿದ್ಧಿಗಳು ಅವರ ಯೋಗಮಹಿಮೆಯಿಂದಲೇ ಬಂದವುಗಳೊ, ಅಥವಾ ಆತ್ಮಜ್ಞಾನದಿಂದ ತೋರಿಕೊಂಡ ಮಹಿಮೆಗಳೊ ವಿವೇಚಿಸಿ ಹೇಳುವುದು ಕಷ್ಟ. ಮುಂಡಕಭಾಷ್ಯದಲ್ಲಿ ಆತ್ಮಜ್ಞಾನಿಯ ಅರ್ಚನೆಯಿಂದ ಶಿಷ್ಯರಿಗೆ ವಿವಿಧಭೂತಿಗಳುಂಟಾಗುವವೆಂದು ಶ್ರೀಶಂಕರಾಚಾರ್ಯರವರು (ಮುಂ. ೩-೧-೧೦) ಹೇಳಿರುತ್ತಾರೆ. ಆತ್ಮವಿದ್ಯಾವಿಲಾಸದಲ್ಲಿ "ಸೂರ್ಯನು ತಂಪುಕಿರಣನಾದರೂ ಚಂದ್ರನು ಉಷ್ಣನಾದರೂ ಬೆಂಕಿಯು ಕೆಳಕ್ಕೆ ಉರಿದರೂ ಇದೆಲ್ಲ ಮಾಯಿಕವೆಂದರಿತ ಜೀವನ್ಮುಕ್ತನು ಅಚ್ಚರಿಪಡುವದಿಲ್ಲ" (೧೮) ಎಂದು ಹೇಳಿರುವ ಸದಾಶಿವರು ಯೋಗಸಿದ್ಧಿಗಳಿಂದ ಜನರನ್ನು ಬೆರಗುಮಾಡುವುದಕ್ಕೆ ಹೋದರೆಂದು ಭಾವಿಸುವದು ಅಷ್ಟು ಒಪ್ಪಾಗುವದಿಲ್ಲ. ಹೇಗೇ ಆಗಲಿ, ಆತ್ಮವಿದ್ಯಾವಿಲಾಸದಲ್ಲಿ ಪರಾಮರ್ಶಿಸಿರುವ ಯೋಗಶಬ್ದವು ಪರಮಾತ್ಮಜ್ಞಾನನಿಷ್ಠೆ ಎಂಬರ್ಥದಲ್ಲಿಯೇ ಪ್ರಯುಕ್ತವಾಗಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಚಿಕ್ಕಂದಿನಿಂದಲೂ ಅಧ್ಯಾತ್ಮಚಿಂತೆಯ ಕಡೆಗೇ ಮನಸ್ಸು ಒಲಿದಿದ್ದ ಈ

ಮಹಾತ್ಮರು ಪೂರ್ವಜನ್ಮದಲ್ಲಿ ಯೋಗಭ್ರಷ್ಟರಾಗಿದ್ದು ಈ ಜನ್ಮದಲ್ಲಿ ಅದೇ ಸಂಸ್ಕಾರದಿಂದ ಮುಂದುವರಿದರೆಂದು ಗೀತಾಪ್ರೇಮಿಗಳೆಲ್ಲರೂ ನಂಬಬಹುದು. ವ್ಯವಹಾರದ ವಿಷಯದಲ್ಲಿ ಅಲಕ್ಷ್ಯದಿಂದಿದ್ದ ಇವರನ್ನು ಜನರು ''ಭ್ರಾಂತನ್ ಕುಟ್ಟಿ'' (ಹುಚ್ಚುಹುಡುಗ) ಎಂಬ ಅಡ್ಡಹೆಸರಿನಿಂದ ಕರೆಯುತ್ತಿದ್ದದ್ದೇನೂ ಆಶ್ಚರ್ಯವಲ್ಲ. ಶ್ರವಣಮನನನಿದಿಧ್ಯಾಸನಗಳ ಪರಿಪಾಕದಿಂದ ಹುಚ್ಚುಹಿಡಿದವರಂತೆ ಅಲ್ಲಲ್ಲಿ ತಿರುಗುತ್ತಿದ್ದ ಇವರನ್ನು ಹುಡುಗರು ಹಿಂಬಾಲಿಸುತ್ತಾ ಕಲ್ಲುಎಸೆಯುವದು, ಮೈಮೇಲೆ ಹತ್ತಿಕೊಳ್ಳುವದು- ಹೀಗೆಲ್ಲ ಚೇಷ್ಟೆಮಾಡುತ್ತಿದ್ದರು ; ಇವರಿಗೆ ಅದೆಲ್ಲ ವಿನೋದವೇ ಆಗಿರುತ್ತಿತ್ತು. ಒಮ್ಮೆ ಮಧುರೆಯಲ್ಲಿ ವೃಷಭವಾಹನ ಮಹೋತ್ಸವವಾಗುತ್ತಿರುವಲ್ಲಿ ಹತ್ತಿರವಿದ್ದ ಹುಡುಗರು ''ನಮ್ಮನ್ನು ಉತ್ಸವಕ್ಕೆ ಕರೆದುಕೊಂಡು ಹೋಗುವೆಯ ?'' ಎಂದು ವಿನೋದಕ್ಕಾಗಿ ಕೇಳಿದರು. ಸದಾಶಿವೇಂದ್ರರು ಹುಡುಗರನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡು ಕಣ್ಣುಮುಚ್ಚುವಂತೆ ಸಂಜ್ಞೆಮಾಡಿದರು. ಸ್ವಲ್ಪಹೊತ್ತಿನ ಮೇಲೆ ಕಣ್ಣುತೆರೆದು ನೋಡಲು ಅವರೆಲ್ಲರೂ ಮಧುರೆಯಲ್ಲಿ ಉತ್ಸವವು ನಡೆಯುತ್ತಿದ್ದ ಸ್ಥಲದಲ್ಲಿದ್ದರು. ಸದಾಶಿವರು ಅವರನ್ನು ಅಲ್ಲಿಂದ ಮರಳಿ ಇದೇ ಯೋಗಪ್ರಭಾವದಿಂದ ಊರಿಗೆ ಕರೆತಂದು ಬಿಟ್ಟರು. ಊರಿನ ಜನರು ಹುಡುಗರು ಹೇಳಿದ ವೃತ್ತಾಂತವನ್ನು ಕೇಳಿ ಅವರ ಕೈಯಲ್ಲಿದ್ದ ದೇವರಪ್ರಸಾದವನ್ನು ಕಂಡು ಚಮಕಿತರಾದರು ; ಸದಾಶಿವೇಂದ್ರರು ಒಬ್ಬ ಸಿದ್ಧಪುರುಷರೆಂಬುದು ಈಗ ಅವರೆಲ್ಲರಿಗೂ ಮನದಟ್ಟಾಯಿತು ! ಅವರು ಹುಚ್ಚರಂತೆ ಕಾಣುತ್ತಿದ್ದರೂ ಯಾರೋ ಜೀವನ್ಮುಕ್ತರಾಗಿದ್ದ ಮಹಾತ್ಮರಾಗಿರಬೇಕೆಂದು ಎಲ್ಲರೂ ನಿಶ್ಚಯಿಸಿದರು. ಇವರು ಹುಚ್ಚರಂತೆ ಅಲೆದಾಡುತ್ತಿದ್ದದನ್ನು ಕೇಳಿದ ಪರಮಶಿವೇಂದ್ರರು 'ಅಯ್ಯೋ, ನನಗೆ ಇಂಥ ಹುಚ್ಚು ಹಿಡಿಯಲಿಲ್ಲವಲ್ಲ !' ಎಂದು ಶಿಷ್ಯನನ್ನು ಕೊಂಡಾಡಿದರಂತೆ !

ಬ್ರಹ್ಮಚಿಂತನೆಯಲ್ಲಿ ಮಗ್ನರಾಗಿ ಹೊರಗನ್ನೇನೂ ಅರಿಯದೆ ಇರುವ ಸ್ಥಿತಿಯಲ್ಲಿ ಒಮ್ಮೆ ಇವರು ತಿರುಚನಾಪಲ್ಲಿಯ ಬಳಿಯಲ್ಲಿ ಘೋಷಾಜನರೊಡನೆ ಇದ್ದ ನವಾಬನ ಬಳಿಗೆ ಬಂದರಂತೆ. ಅವಧೂತರಾದವರು ನಗ್ನರಾಗಿರುವದು ಸ್ವಾಭಾವಿಕವೆಂಬುದನ್ನರಿಯದೆ ನವಾಬನು ಸಿಟ್ಟಿನಿಂದ ತನ್ನ ಕತ್ತಿಯನ್ನೆಳೆದು ಇವರ ತೋಳನ್ನು ಕತ್ತರಿಸಿಬಿಟ್ಟನಂತೆ. ನವಾಬನು ಇವರ ವೇಷವನ್ನು ಕಂಡು ಶತ್ರುಗಳ

ಕಡೆಯ ಬೇಹುಗಾರ ನಿರಬೇಕೆಂದೂಹಿಸಿ ಹೀಗೆ ಮಾಡಿದನೆಂದೂ ಕೆಲವರು ಹೇಳುತ್ತಾರೆ. ನಿಜವು ಹೇಗೆ ಇರಲಿ, ಈ ತಿತಿಕ್ಷುಶಿರೋಮಣಿಗಳು ತಮಗೆ ಏನೂ ಆಗದಿದ್ದರೆ ಹೇಗೋ ಹಾಗೆ ಸುಮ್ಮನೆ ಮುಂದಕ್ಕೆ ಹೋಗಿಬಿಟ್ಟರಂತೆ. ಇದನ್ನು ಕಂಡು ವಿಸ್ಮಯದಿಂದಲೂ ಮಹಾತ್ಮರೊಬ್ಬರನ್ನು ಹೀಗೆ ಅನಿಮಿತ್ತವಾಗಿ ನೋಯಿಸಿದೆನಲ್ಲ - ಎಂಬ ಪಶ್ಚಾತ್ತಾಪದಿಂದಲೂ ನವಾಬನು ಅವರನ್ನು ಹಿಂಬಾಲಿಸಿಕೊಂಡು ಹೋಗಿ, ಅವರು ಬಹಿರ್ಮುಖರಾದಾಗ ತನ್ನ ತಪ್ಪನ್ನು ತಿಳಿಸಿ ತನ್ನನ್ನು ಕ್ಷಮಿಸಿ ಉದ್ಧರಿಸಬೇಕೆಂದು ಬೇಡಿಕೊಂಡನು. ಕೃಪಾಘನರಾದ ಮುನೀಂದ್ರರು ಕಡಿದ ತೋಳನ್ನು ತಮ್ಮ ಇನ್ನೊಂದು ಕೈಯಿಂದ ಸವರಲು ಅದು ಮತ್ತೆ ಎಂದಿನಂತೆ ಆಗಿಬಿಟ್ಟಿತಂತೆ ! ಅವರು ನವಾಬನನ್ನು ಹರಸಿ ಮುಂದಕ್ಕೆ ದಯಮಾಡಿಸಿಬಿಟ್ಟರಂತೆ.

ಇವರ ಭಕ್ತಪರಾಧೀನತೆಯನ್ನು ಮತ್ತೊಂದು ಕಥೆಯು ಸೂಚಿಸುತ್ತದೆ. ಪುದುಕೋಟೆಯಲ್ಲಿ ಆಗ್ಗೆ ರಾಜನಾಗಿದ್ದ ವಿಜಯರಘುನಾಥನ್ ತೊಂಡಮಾನನು, ಈ ಮಹಾತ್ಮರು ತಿರುವದಂಗುಲಮ್ ಎಂಬ ಊರಿನ ಬಳಿಯ ಕಾಡಿನಲ್ಲಿ ಸಂಚರಿಸುತ್ತಿರುವರೆಂದು ತಿಳಿದು ಅವರನ್ನು ಕಂಡು ಸತ್ಕರಿಸಿದನಂತೆ. ಮೌನ ವ್ರತದಲ್ಲಿದ್ದ ಸದಾಶಿವೇಂದ್ರರು ಮರಳಮೇಲೆ ಯಾವುದೋ ಉಪದೇಶವನ್ನು ಬರೆದರಂತೆ. ರಾಜನು ಆ ಮರಳನ್ನು ಅರಮನೆಯ ದೇವಸ್ಥಾನದಲ್ಲಿರಿಸಿ ಅರ್ಚನೆಗೆ ಏರ್ಪಡಿಸಿದನು; ಅಂದಿನಿಂದ ಅರಮನೆಯಲ್ಲಿ ಆ ದಿವ್ಯವಾದ ಅಭಿಮಂತ್ರಿತವಾದ ಮರಳಿನ ಅರ್ಚನೆಯು ಅವಿಚ್ಛಿನ್ನವಾಗಿ ನಡೆಯುತ್ತಾ ಬಂದಿದೆ.

ಸದಾಶಿವೇಂದ್ರರು ಶಿವಸಹಸ್ರನಾಮವನ್ನು ಉಚ್ಚರಿಸುತ್ತಿರುವಾಗ ಮಧುರೆಯಲ್ಲಿ ದೇವರ ಮೇಲೆ ಆಕಾಶದಿಂದ ಕಮಲಗಳು ಬೀಳುತ್ತಿದ್ದವೆಂದು ಒಂದು ಕಥೆಯಿದೆ. ಕಾಮಕೋಟಿಪೀಠದಲ್ಲಿ ಇವರ ಗುರುಗಳು ಒಮ್ಮೆ ಚಂದ್ರಮಹೇಶ್ವರಲಿಂಗವನ್ನು ಅರ್ಚಿಸುವಂತೆ ಆಜ್ಞಾಪಿಸಿರಲು, ನೂರಾರು ಜನರು ಪೂಜಾವಲೋಕನಕ್ಕಾಗಿ ಕಾದಿದ್ದರು ; ಆದರೆ ಸದಾಶಿವೇಂದ್ರರು ಸಮಾಧಿಯಲ್ಲಿ ಬಾಹ್ಯವೆಲ್ಲವನ್ನೂ ಮರೆತು ಕುಳಿತುಬಿಟ್ಟರಂತೆ, ಪರಮಶಿವೇಂದ್ರರು ಅಲ್ಲಿಗೆ ಬಂದಾಗ ಆನಂದದಿಂದ 'ಇವನೇ ಸದಾಶಿವಬ್ರಹ್ಮವು' ಎಂದರಂತೆ ! ಈ ಎರಡು ಕಥೆಗಳೂ ಸದಾಶಿವೇಂದ್ರರಿಗಿದ್ದ ದೈವಭಕ್ತಿಯ ಮಹಿಮೆಯನ್ನು ಸೂಚಿಸುವವುಗಳಾಗಿವೆ.

ಅನೇಕ ಮಹಿಮೆಗಳು ಮಹಾತ್ಮರ ಚರಿತ್ರೆಯಲ್ಲಿ ಸೇರಿಕೊಳ್ಳುವದು ಸ್ವಾಭಾವಿಕವು. ಆದರೆ ಶ್ರೀಸದಾಶಿವೇಂದ್ರರೇ ಪರಬ್ರಹ್ಮದ ಒಂದು ದಿವ್ಯಮಹಿಮೆ ಎಂದು ನಾವು ನಂಬಬಹುದು. ಅವರ ಚರಿತ್ರೆಯ ವಿಶೇಷಾಂಶಗಳು ಸಿಕ್ಕದೆ ಇರುವದು ನಮ್ಮ ದೌರ್ಭಾಗ್ಯವು. ಅವರು ಯೋಗಿಗಳೂ ಆಗಿದ್ದಂತೆ ಕವಿವರ್ಯರೂ ಆಗಿರುತ್ತಿದ್ದರೆಂಬುದಕ್ಕೆ ಆತ್ಮವಿದ್ಯಾವಿಲಾಸವೇ ಸಾಕ್ಷಿ. ಅವರು ರಚಿಸಿರುವ ಕೆಲವು ಕೀರ್ತನೆಗಳನ್ನು ಈ ಗ್ರಂಥದ ಕೊನೆಯಲ್ಲಿ ಸೇರಿಸಿರುತ್ತೇವೆ. ಜ್ಞಾನಭಕ್ತಿವೈರಾಗ್ಯಗಳನ್ನು ಭಾವುಕರ ಹೃದಯಲ್ಲಿ ಉದ್ಬೋಧಗೊಳಿಸಲು ಅವು ಸಹಕಾರಿಗಳಾಗುವವೆಂದು ನಮ್ಮ ನಂಬಿಕೆ.

ಸದಾಶಿವೇಂದ್ರರು ಸುಮಾರು ಕ್ರಿ.ಶ. ೧೭೫೦ ಅಥವಾ ೧೭೫೩ರಲ್ಲಿ ಸಮಾಧಿಸ್ಥರಾದರಂತೆ. ಮಿಥುನಮಾಸದಲ್ಲಿ ಜ್ಯೇಷ್ಠ ಶುದ್ಧ ದಶಮಿಯ ದಿನ ತಾವು ಸಿದ್ಧಿಯನ್ನು ಹೊಂದುವುದಾಗಿ ಅವರು ಮೊದಲೇ ತಿಳಿಸಿದ್ದರಂತೆ ಆ ದಿನಕ್ಕೆ ಸರಿಯಾಗಿ ಒಬ್ಬ ಬ್ರಾಹ್ಮಣನು ತಂದ ಒಂದು ಲಿಂಗವನ್ನು ನೆರೂರಿನಲ್ಲಿರುವ ಅವರ ಸಮಾಧಿಯ ಬಳಿಯಲ್ಲಿ ಪ್ರತಿಷ್ಠೆಮಾಡಲಾಗಿದೆ. ಅಲ್ಲಿ ನಿತ್ಯಾರ್ಚನೆಯು ನಡೆಯುವಂತೆ ಪುದುಕೋಟೆಯ ಮಹಾರಾಜರು ಏರ್ಪಡಿಸಿರುತ್ತಾರೆ. ಮಹಾತ್ಮರ ಚರಿತ್ರೆಯು ಹೇಗೆ ಸ್ಮರಣೀಯವೋ ಹಾಗೆ ದೇಹವಿಸರ್ಜನೆಯೂ ಸ್ಮರಣೀಯವಾಗಿರುತ್ತದೆ. ಸದಾಶಿವೇಂದ್ರರು ದೇಹವನ್ನು ಎರಡು ಸಲ ಬಿಟ್ಟು ಮತ್ತೂ ದೇಹಧಾರಿಗಳಾಗಿ ಕಾಣಿಸಿಕೊಂಡರೆಂದೂ ಮೂರನೆಯ ಸಲಕ್ಕೆ ಆತ್ಯಂತಿಕವಾಗಿ ದೇಹವನ್ನು ಬಿಟ್ಟರೆಂದೂ ಒಂದು ಕಥೆಯಿದೆ. ಸ್ಥೂಲ ಸೂಕ್ಷ್ಮಕಾರಣದೇಹಗಳನ್ನು ಬಿಟ್ಟಿದ್ದಕ್ಕೆ ಇದು ಹೆಗ್ಗುರುತು ಎಂದು ಶ್ರೀಶೃಂಗಗಿರಿಯ ಪೀಠಾಧಿಪರಾಗಿದ್ದ ಶ್ರೀಸಚ್ಚಿದಾನಂದಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳವರು ಒಂದಾನೊಂದು ಶ್ಲೋಕದಲ್ಲಿ ವರ್ಣಿಸಿರುತ್ತಾರೆ.

ಮುಮುಕ್ಷುಗಳಿಗೆ ಆದರ್ಶವಾಗಿರುವ ಈ ಮಹಾತ್ಮರ ಚರಿತ್ರೆಯ ಶ್ರವಣವೂ ಇವರ ಕೃತಿಗಳ ಪಠನವೂ ಲಭಿಸಲಿ, ಜೀವನ್ಮುಕ್ತಿಯ ಆನಂದವನ್ನು ಅವರು ಅನುಗ್ರಹಿಸಲಿ - ಎಂಬುದೇ ನಮ್ಮ ಹಾರೈಕೆ.

ನಂದನ ಕಾರ್ತಿಕ ಬಹುಳ, ೩

(31-10-1952) **- ಅನುವಾದಕ**

## ವಿಷಯಗಳ ಪರಿವಿಡಿ


| ವಿಷಯ | | ಪುಟ | |
|---|---|---|---|
| ಮುನ್ನುಡಿ | | | |
| ಎರಡನೆಯ ಸಂಸ್ಕರಣಕ್ಕೆ ಪೀಠಿಕೆ | | | |
| ಶ್ರೀಸದಾಶಿವೇಂದ್ರಸರಸ್ವತಿಗಳವರ ವೃತ್ತಾಂತ | | | |
| ಆತ್ಮವಿದ್ಯಾವಿಲಾಸ | | | 1-23 |
| ಶ್ರೀಸದಾಶಿವೇಂದ್ರಸರಸ್ವತಿಗಳವರ ಕೆಲವು ಕೀರ್ತನೆಗಳು | | | 24-26 |
| ೧. | ಎಲ್ಲವೂ ಬ್ರಹ್ಮಮಯವು | 24 | |
| ೨. | ಜೀವತ್ವವು ಬ್ರಹ್ಮವಲ್ಲಿ ಕಲ್ಪಿತ | 24 | |
| ೩. | ಇಂಥವರಿಗೆ ಚಿಂತೆಯಿಲ್ಲ | 25 | |
| ೪. | ಇಂಥವರಿಗೆ ಸ್ಥಿರತ್ವವಿಲ್ಲ | 25 | |
| ೫. | ಗೋಪಾಲನನ್ನು ಭಜಿಸು | 25 | |
| ೬. | ರಾಮರಸವನ್ನು ಕುಡಿ | 26 | |
| ೭. | ನನ್ನ ಹೃದಯದಲ್ಲಿ ರಾಮನು ಆಡುತ್ತಿರುವನು | 26 | |
| ಸದಾಶಿವೇಂದ್ರಸ್ತುತಿ | | | 27-42 |
| ಸದಾಶಿವಪಞ್ಚರತ್ನ | | | 43-[illegible] |


---

## ಓದುಗರಿಗೆ

ಗ್ರಂಥದ ಟಿಪ್ಪಣಿಯಲ್ಲಿ ಬಂದಿರುವ ಅಕ್ಷರಸಂಕೇತಗಳ ವಿವರವನ್ನು ಈ ಕೆಳಗೆ ಕೊಟ್ಟಿದೆ.

| | |
|---|---|
| ಮಾಂ. ಕಾ. ಭಾ. | ಮಾಂಡೂಕ್ಯಕಾರಿಕಾಭಾಷ್ಯ |
| ಛಾಂ. | ಛಾಂದೋಗ್ಯೋಪನಿಷತ್ತು |
| ಮಾಂ. ಕಾ. | ಮಾಂಡೂಕ್ಯಕಾರಿಕೆ |
| ಗೀತಾ. | ಭಗವದ್ಗೀತೆ |
| ಸೂ. ಭಾ | ಬ್ರಹ್ಮಸೂತ್ರಭಾಷ್ಯ |
| ಬ್ರ. ಸೂ. | ಬ್ರಹ್ಮಸೂತ್ರಭಾಷ್ಯ |

---

॥ ಓಂ ॥

# ಆತ್ಮವಿದ್ಯಾವಿಲಾಸ

ಚಿನ್ಮುದ್ರಿತಕರಕಮಲಂ
    ಚಿ[illegible]ಷ್ಟದಂ ವಿಮಲಮ್ ।
ಗುರುವರಮಾದ್ಯಂ ಕಂಚನ
    ನಿರವಧಿಕಾನನ್ದನಿರ್ಭರಂ ವನ್ದೇ ॥ [1]

ಭಾವಾರ್ಥ : ಕೈಯಲ್ಲಿ ಚಿನ್ಮುದ್ರೆಯನ್ನು[2] ಧರಿಸಿದವನಾಗಿಯೂ ಭಕ್ತರು ಬೇಕೆನ್ನುವ ಇಷ್ಟವನ್ನೆಲ್ಲ ಕೊಡುವವನಾಗಿಯೂ ಇರುವ ಪರಿಶುದ್ಧ ವಾದ ನಿರತಿಶಯಾನಂದಪರಿಪೂರ್ಣನಾದ ಒಬ್ಬಾನೊಬ್ಬ ಆದಿಗುರುವನ್ನು ವಂದಿಸುತ್ತೇನೆ.

ವಟತರುನಿಕಟನಿವಾಸಂ
    ಪಟುತರವಿಜ್ಞಾನಮುದ್ರಿತಕರಾಬ್ಜಮ್ ।
ಕಂಚನ ದೇಶಿಕಮಾದ್ಯಂ
    ಕೈವಲ್ಯಾನನ್ದಕನ್ದಲಂ ವನ್ದೇ ॥ ೧ ॥

೧. ಆಲದಮರದ ಬುಡದಲ್ಲಿ ವಾಸವಾಗಿರುವವನಾಗಿ, ಶಿಷ್ಯರ ಅಜ್ಞಾನವನ್ನು ಪರಿಹರಿಸುವದಕ್ಕೆ ಸಮರ್ಥವಾದ ಜ್ಞಾನಮುದ್ರೆಯಿಂದ

---

1. ಈ ಪದ್ಯವು ಈ ಗ್ರಂಥಕ್ಕೆ ಸೇರಿದ್ದೋ ಅಲ್ಲವೋ ಸಂದೇಹವಾಗಿದೆ ; ಮುಂದಿನ ಆರ್ಯೆಯಲ್ಲಿ ಇದರ ಅರ್ಥವು ಬಂದಿದೆ. ಉಪಸಂಹಾರದಲ್ಲಿ ಅರುವತ್ತೆರಡು ಆರ್ಯೆಗಳಲ್ಲಿ ಗ್ರಂಥವನ್ನು ಮುಗಿಸಿದ್ದೇನೆಂದು ಗ್ರಂಥಕರ್ತರು ಹೇಳಿರುವದರಿಂದ ಈ ಆರ್ಯೆಯನ್ನು ಹೊಸದಾಗಿ ಯಾರೋ ಸೇರಿಸಿರಬಹುದೆಂಬ ಶಂಕೆಯುಂಟಾಗುವುದು.

2. ಹೆಬ್ಬೆರಳೂ ತೋರುಬೆರಳೂ ಕೂಡಿರುವಂತೆ ಮಾಡಿಕೊಂಡಿರುವ ಜ್ಞಾನಮುದ್ರೆ. ಇದರ ಅರ್ಥವನ್ನು ಆಗಮುಜ್ಞರಿಂದ ತಿಳಿದುಕೊಳ್ಳಬೇಕು.

ಕೂಡಿದ ಕಲಕಮಲವುಳ್ಳವನಾಗಿರುವ ಕೈವಲ್ಯಾನಂದಪರಿಪೂರ್ಣನಾಗಿರುವ ಒಬ್ಬಾನೊಬ್ಬ ಆದಿಗುರುವನ್ನು[1] ವಂದಿಸುತ್ತೇನೆ.

ನಿರವಧಿಸಂಸೃತಿನೀರಧಿ-
ನಿಪತಿತಜನತಾರಣಸ್ಫುರನ್ನೌಕಾಮ್ ।
ಪರಮತಭೇದನಘುಟಕಾಂ
ಪರಮಶಿವೇನ್ದ್ರಾರ್ಯಪಾದುಕಾಂ ನೌಮಿ ॥ ೨ ॥

೨. ಪಾರವಿಲ್ಲದ ಸಂಸಾರದ ಕಡಲಿನಲ್ಲಿ ಬಿದ್ದಿರುವ ಜನರನ್ನು ಕಡೆಹಾಯಿಸುವದಕ್ಕೆ ಉತ್ತಮವಾದ ಹಡಗಾಗಿಯೂ ಉಳಿದವರ ಮತವನ್ನು ಭೇದಿಸುವ ಗುಂಡಾಗಿಯೂ ಇರುವ ಪರಮಶಿವೇಂದ್ರಾರ್ಯರ ಪಾದುಕೆಯನ್ನು ನಮಸ್ಕರಿಸುತ್ತೇನೆ.

ದೇಶಿಕಪರಮಶಿವೇನ್ದ್ರ-
ದೇಶವಶೋದ್ಬುದ್ಧದಿವ್ಯಮಹಿಮಾಹಮ್ ।
ಸ್ವಾತ್ಮನಿ ವಿಶ್ರಾನ್ತಿಕೃತೇ
ಸರಸಂ ಪ್ರಸ್ತೌಮಿ ಕಿಂಚಿದಿದಮ್ ॥ ೩ ॥

೩. ಗುರುಗಳಾದ ಪರಮಶಿವೇಂದ್ರರ ಅಪ್ಪಣೆಯಿಂದ ದಿವ್ಯ ಮಹಿಮೆಯು ಮೇಲಕ್ಕೆದ್ದುಕೊಳ್ಳಲಾಗಿ ನನ್ನ ಆತ್ಮನಲ್ಲಿ ವಿಶ್ರಾಂತಿಯನ್ನು ಪಡೆಯುವದಕ್ಕೋಸ್ಕರ[2] ಸರಸವಾದ ಈ ಗ್ರಂಥವೊಂದನ್ನು ಮೊದಲು ಮಾಡಿರುವೆನು.

ನಿರುಪಮನಿತ್ಯನಿರೀಹೋ
ನಿಷ್ಕಲನಿರ್ಮಾಯನಿರ್ಗುಣಾಕಾರಃ ।
ವಿಗಲಿತಸರ್ವವಿಕಲ್ಪಃ
ಶುದ್ಧೋ ಬುದ್ಧಶ್ಚಕಾಸ್ತಿ ಪರಮಾತ್ಮಾ ॥ ೪ ॥

1. ದಕ್ಷಿಣಾಮೂರ್ತಿಯನ್ನು. 2. ಆತ್ಮಾನುಸಂಧಾನದಿಂದ ಮನಸ್ಸು ಆವನಲ್ಲಿಯೇ ಸಮಾಹಿತವಾಗಿ ವಿಶ್ರಾಂತಿ ಯನ್ನು ಹೊಂದುವದು

೪. ಉಪಮಾನರಹಿತನೂ ನಿತ್ಯನೂ ಕ್ರಿಯಾರಹಿತನೂ ಅವಯವ ರಹಿತನೂ ಮಾಯಾರಹಿತನೂ ಗುಣವೂ ಆಕಾರವೂ ಇಲ್ಲದ, ಯಾವದೊಂದು ವಿಕಲ್ಪವೂ ಇಲ್ಲದ, ಶುದ್ಧನಾದ ಚೈತನ್ಯಸ್ವರೂಪನೂ ಆದ ಪರಮಾತ್ಮನು ಬೆಳಗುತ್ತಿರುವನು.[1]

**ಸ್ವಾವಿದ್ಯೈಕನಿಬದ್ಧಃ**
**ಕುರ್ವನ್ ಕರ್ಮಾಣಿ ಮುಹ್ಯಮಾನಃ ಸನ್ ।**
**ದೈವಾದ್ವಿಧೂತಬನ್ಧಃ**
**ಸ್ವಾತ್ಮಜ್ಞಾನಾನ್ಮುನಿರ್ಜಯತಿ ॥ ೫ ॥**

೫. ಕೇವಲ ಆತ್ಮನ ಅಜ್ಞಾನದಿಂದಲೇ ಬದ್ಧನಾಗಿ, ಬೇರೆಬೇರೆಯ ಕರ್ಮಗಳನ್ನು ಮಾಡಿ ಮೋಹಗೊಳ್ಳುತ್ತಾ ತನ್ನ ಆತ್ಮನ ಜ್ಞಾನದಿಂದ ಹೇಗೋ ಬಂಧವನ್ನು ಕಳೆದುಕೊಂಡ ಮುನಿಯು ಒಪ್ಪುತ್ತಿರುವನು.[2]

**ಮಾಯಾವಶೇನ ಸುಪ್ತೋ**
**ಮಧ್ಯೇ ಪಶ್ಯನ್ ಸಹಸ್ರಶಃ ಸ್ವಪ್ನಾನ್ ।**
**ದೇಶಿಕವಚಃಪ್ರಬುದ್ಧೋ**
**ದೀವ್ಯತ್ಯಾನನ್ದವಾರಿಧೌ ಕೋಽಪಿ ॥ ೬ ॥**

೬. ಮಾಯೆಯ ವಶದಿಂದ ನಿದ್ರೆಯನ್ನು ಹೊಂದಿ ನಡುವೆ ಸಾವಿರಾರು ಕನಸುಗಳನ್ನು ಕಾಣುತ್ತಾ ಗುರುಗಳ ವಚನದಿಂದ ಎಚ್ಚೆತ್ತು[3] ಯಾವನೋ ಒಬ್ಬನು ಆನಂದಸಾಗರದಲ್ಲಿ ಆಡುತ್ತಿರುವನು.

---

1. ಇದನ್ನೇ ಬ್ರಹ್ಮವೆಂದು ವೇದಾಂತಿಗಳು ಕರೆಯುವರು.
2. ಅವಿದ್ಯೆಯಿಂದಾಗಿರುವ ಬಂಧವು ಸ್ವಾಭಾವಿಕವಾಗಿ ಅನಾದಿಕಾಲದಿಂದಲೂ ಇರುವದು ; ಅದನ್ನು ಕಳೆಯುವ ಆತ್ಮೈಕ್ಯಜ್ಞಾನವು ಶಾಸ್ತ್ರದಿಂದ ಈಶ್ವರ ಪ್ರಸಾದವಾಗಿ ಬರತಕ್ಕದ್ದಾಗಿರುವದು.
3. ಮಾಂ. ಕಾಂ. ಭಾ. ೧-೧೬ರ ಅಭಿಪ್ರಾಯವಿದು.

ಪ್ರಾಕೃತಭಾವಮಪಾಸ್ಯ
ಸ್ವೀಕೃತನಿಜರೂಪಸಚ್ಚಿದಾನನ್ದಃ ।
ಗುರುವರಕರುಣಾಪಾಙ್ಗಾ-
ದ್ಗೌರವಮಾಸಾದ್ಯ ಮಾದ್ಯತಿ ಪ್ರಾಜ್ಞಃ ॥ ೭ ॥

೭. ಪ್ರಾಕೃತಸ್ವರೂಪವನ್ನು[1] ತೊಲಗಿಸಿಕೊಂಡು, ತನ್ನ ಪರಮಾರ್ಥವಾದ ಸಚ್ಚಿದಾನಂದಸ್ವರೂಪವನ್ನು ಸ್ವೀಕರಿಸಿ, ಗುರುವರ್ಯನ ಕರುಣಾಕಟಾಕ್ಷದಿಂದ ಗೌರವವನ್ನು ಹೊಂದಿ ಪ್ರಾಜ್ಞನಾದವನು ಹರ್ಷದಿಂದ ಉಬ್ಬುತ್ತಿರುವನು.

ಶ್ರೀಗುರುಕೃಪಯಾ ಸಚ್ಚಿ-
ತ್ಸುಖನಿಜರೂಪೇ ನಿಮಗ್ನಧೀರ್ಮೌನೀ ।
ವಿಹರತಿ ಕಶ್ಚನ ವಿಬುಧಃ
ಶಾನ್ತಾಹನ್ತೋ[1] ನಿತಾನ್ತಮುದಿತಾನ್ತಃ ॥ ೮ ॥

೮. ಶ್ರೀಗುರುವಿನ ಕೃಪೆಯಿಂದ ತನ್ನ ಸಚ್ಚಿದಾನಂದರೂಪದಲ್ಲಿಯೇ ಮುಳುಗಿರುವ, ಬುದ್ಧಿಯುಳ್ಳ ಮೌನಿಯಾದ[2] ಯಾವನೋ ಒಬ್ಬ ವಿದ್ವಾಂಸನು ಅಹಂಕಾರವನ್ನು ನಾಶಪಡಿಸಿಕೊಂಡು[3] ಒಳಗೇ ಅತ್ಯಂತವಾಗಿ ಆನಂದಪಡುತ್ತಾ ವಿಹರಿಸುತ್ತಿರುವನು.

ಗುರುವರಕರುಣಾಲಹರೀ -
ವ್ಯತಿಕರಭರಶೀತಲಸ್ವಾನ್ತಃ ।
ರಮತೇ ಯತಿವರ ಏಕೋ
ನಿರುಪಮಸುಖಸೀಮನಿ ಸ್ವೈರಮ್ ॥ ೯ ॥

---

1. ಪ್ರಕೃತಿಯ ಉಪಾಧಿಯಿಂದಾಗಿರುವ ಸಂಸಾರಿತ್ವವನ್ನು.
2. ತತ್ತ್ವವನ್ನೇ ಮನನಮಾಡುತ್ತಿರುವ.
3. ದೇಹಾದಿಗಳು ನಾನೆಂಬ ಅಭಿಮಾನವನ್ನು ತೊಲಗಿಸಿಕೊಂಡು.

೯. ಗುರುವರನ ಕರುಣಾತರಂಗವು ತಗಲಿದ್ದರಿಂದ ಹೃದಯವೆಲ್ಲಾ ಅತಿಶಯವಾಗಿ ಶೀತಲವಾಗಲು ಯಾವನೋ ಒಬ್ಬ ಯತಿಶ್ರೇಷ್ಠನು ನಿರುಪಮಾನವಾದ ಆನಂದದ ಬದಿಯಲ್ಲಿ ಸ್ವೇಚ್ಛೆಯಿಂದ ಕ್ರೀಡಿಸುತ್ತಿರುವನು.

ಶ್ರೀದೇಶಿಕವರಕರುಣಾ-
ರವಿಕರಸಮಪೋಹಿತಾನ್ತರಧ್ವಾನ್ತಃ ।
ವಿಹರನ್ ಮಸ್ಕರಿವರ್ಯೋ
ನಿರವಧಿಕಾನನ್ದನೀರದಾವಾಸ್ತೇ ॥ ೧೦ ॥

೧೦. ಶ್ರೀಗುರುವಿನ ಕರುಣೆಯೆಂಬ ಸೂರ್ಯಕಿರಣದಿಂದ ಒಳಗಿನ ಕತ್ತಲೆಯನ್ನೆಲ್ಲ[1] ಹೋಗಲಾಡಿಸಿಕೊಂಡು ವಿಹರಿಸುತ್ತಿರುವ ಯತಿವರೇಣ್ಯನು ಪಾರವಿಲ್ಲದ ಆನಂದಸಾಗರದಲ್ಲಿಯೇ ಇರುತ್ತಿರುವನು.

ಜನಿವಿಪರೀತಕ್ರಮತೋ
ಬುದ್ಧ್ವಾ ಪ್ರವಿಲಾಪ್ಯ ಪಞ್ಚಭೂತಾನಿ ।
ಪರಿಶಿಷ್ಟಮಾತ್ಮತತ್ತ್ವಂ
ಪಶ್ಯನ್ನಾಸ್ತೇ ಮುನಿಃ ಶಾನ್ತಃ ॥ ೧೧ ॥

೧೧. ಉತ್ಪತ್ತಿಗೆ ವಿರುದ್ಧವಾದ ಕ್ರಮದಿಂದ ತಿಳಿದು ಆಕಾಶಾದಿ ಪಂಚಭೂತಗಳನ್ನು ಪೃಥ್ವಿಯಿಂದ ಹಿಡಿದು ಹಿಂದುಹಿಂದಿನ ಭೂತದಲ್ಲಿ ಲಯಮಾಡುತ್ತಾ[2] ಕೊನೆಗೆ ಉಳಿಯುವ ಆತ್ಮತತ್ತ್ವವನ್ನು ನೋಡುತ್ತಾ ಮುನಿಯು ಶಾಂತನಾಗಿರುವನು.

---

1. ಅಜ್ಞಾನವನ್ನೆಲ್ಲ.
2. ಪೃಥ್ವಿಯನ್ನು ಅಪ್ಪಿನಲ್ಲಿ. ಅಪ್ಪನ್ನು ತೇಜಸ್ಸಿನಲ್ಲಿ. ತೇಜಸ್ಸನ್ನು ವಾಯುವಿನಲ್ಲಿ. ವಾಯುವನ್ನು ಆಕಾಶದಲ್ಲಿ, ಆಕಾಶವನ್ನು ಆತ್ಮನಲ್ಲಿ - ಹೀಗೆ ಕಾರ್ಯವು ಕಾರಣರೂಪವೇ ಎಂದು ಲಯಚಿಂತನೆಮಾಡುತ್ತಾ.

**ಜಗದಖಿಲಮಿದಮಸಾರಂ**
**ಮಾಯಿಕಮೇವೇತಿ ಮನಸಿ ಮನ್ವಾನಃ ।**
**ಪರ್ಯಟತಿ ಪಾಟಿತಾಶಃ**
**ಪ್ರಗಲಿತಮದಮಾನಮತ್ಸರಃ ಕೋಽಪಿ ॥ ೧೨ ॥**

೧೨. ಈ ಜಗತ್ತೆಲ್ಲವೂ ಅಸಾರವು, ಮಾಯಿಕವೇ, ಎಂದು ಮನಸ್ಸಿನಲ್ಲಿ ಚಿಂತಿಸಿ ಆಶೆಯನ್ನು ಕಿತ್ತುಹಾಕಿ, ಮದಮಾನಮತ್ಸರಗಳನ್ನು ಕಳೆದುಕೊಂಡಿರುವನಾಗಿ ಯಾವನೋ ಒಬ್ಬನು ಸಂಚರಿಸುತ್ತಿರುವನು.

**ನಾತ್ಮನಿ ಕಿಂಚಿನ್ಮಾಯಾ**
**ತತ್ಕಾರ್ಯಂ ವಾಸ್ತಿ ವಸ್ತುತೋ ವಿಮಲೇ ।**
**ಇತಿ ನಿಶ್ಚಯವಾನನ್ತ-**
**ರ್ಹೃಷ್ಯತ್ಯಾನನ್ದನಿರ್ಭರೋ ಯೋಗೀ ॥ ೧೩ ॥**

೧೩. ನಿಜವಾಗಿ ನಿರ್ಮಲನಾದ ಆತ್ಮನಲ್ಲಿ ಮಾಯೆಯಾಗಲಿ, ಮಾಯೆಯ ಕಾರ್ಯವಾಗಲಿ ಒಂದಿಷ್ಟೂ ಇಲ್ಲವೇ ಇಲ್ಲ-[1] ಎಂದು ನಿಶ್ಚಯಿಸಿ ಯೋಗಿಯಾದವನು ತನ್ನೊಳಗೆ ತಾನು ಆನಂದದಿಂದ ತುಂಬಿ ಉಬ್ಬುತ್ತಿರುವನು.

**ತ್ವಮಹಭಿಮಾನಹೀನೋ**
**ಮೋದಿತನಾನಾಜನಾಚಾರಃ ।**
**ವಿಹರತಿ ಬಾಲವದೇಕೋ**
**ವಿಮಲಸುಖಾಮ್ಭೋನಿಧೌ ಮಗ್ನಃ ॥ ೧೪ ॥**

೧೪. ನೀನು, ನಾನು - ಎಂಬ ಅಭಿಮಾನವಿಲ್ಲದೆ ಬೇರೆಬೇರೆ ಜನರ ಆಚಾರವನ್ನು ಕಂಡು ಸಂತೋಷಪಡುತ್ತಾ, ನಿರ್ಮಲವಾದ ಆನಂದಸಾಗರ ದಲ್ಲಿ ಮುಳುಗಿ ಯಾವನೋ ಒಬ್ಬನು ಬಾಲಕನಂತೆ ಓಡಾಡುತ್ತಿರುವನು.

---

1. ಆತ್ಮನಿಗಿಂತ ಬೇರೆಯಾಗಿ ಸ್ವತಂತ್ರವಾಗಿಲ್ಲದ್ದರಿಂದ ಆವನಲ್ಲಿಯೇ ಕಲ್ಪಿತವಾಗಿ ತೋರುತ್ತಿದೆ.

ಅವಧೂತಕರ್ಮಜಾಲೋ
ಜಡಬಧಿರಾನ್ಧೋಪಮಃ ಕೋಽಪಿ ।
ಆತ್ಮಾರಾಮೋ ಯತಿರಾ-
ಡಟವೀಕೋಣೇಷ್ವಸನ್ನಾಸ್ತೇ ॥ ೧೫ ॥

೧೫. ಕರ್ಮಸಮೂಹವನ್ನೆಲ್ಲ ಕೂಡವಿಹಾಕಿ, ಜಡನಂತೆಯೂ ಕಿವುಡನಂತೆಯೂ ಕುರುಡನಂತೆಯೂ[1] ಯಾವನೋ ಒಬ್ಬ ಯತಿರಾಜನು ಆತ್ಮಾರಾಮನಾಗಿ ಅಡವಿಯ ಮೂಲೆಗಳಲ್ಲಿ ಅಡ್ಡಾಡುತ್ತಿರುವನು.

ಶಾನ್ತ್ಯಾ ದೃಢೋಪಗೂಢಃ
ಶಾನ್ತಸಮಸ್ತಾನ್ಯವೇದನೋದಾರಃ ।
ರಮತೇ ರಸಜ್ಞ ಏಕೋ
ರಮ್ಯೇ ಸ್ವಾನನ್ದಪರ್ಯಙ್ಕೇ ॥ ೧೬ ॥

೧೬. ಶಾಂತಿಯ ದೃಢಾಲಿಂಗನದಿಂದ ಕೂಡಿದವನಾಗಿ ಮತ್ತೆ ಯಾವದೊಂದನ್ನೂ ತಿಳಿಯಬೇಕೆಂಬ ಹವಣಿಯಿಲ್ಲದೆ ಹೆಚ್ಚುಗಾರಿಕೆಯುಳ್ಳ ಯಾವನೋ ಒಬ್ಬ ರಸಜ್ಞನು ರಮ್ಯವಾದ ಆತ್ಮಾನಂದವೆಂಬ ಮಂಚದಲ್ಲಿ ಕ್ರೀಡಿಸುತ್ತಿರುವನು.

ಉನ್ಮೂಲಿತವಿಷಯಾರಿಃ
ಸ್ವೀಕೃತವೈರಾಗ್ಯಸರ್ವಸ್ವಃ ।
ಸ್ವಾತ್ಮಾನನ್ದಮಹಿಮ್ನಿ
ಸ್ವಾರಾಜ್ಯೇಽಸ್ಮಿನ್ ವಿರಾಜತೇ ಯತಿರಾಟ್ ॥ ೧೭ ॥

೧೭. ವಿಷಯಗಳೆಂಬ ಶತ್ರುಗಳನ್ನು ಬೇರುಸಹಿತ ಕಿತ್ತುಹಾಕಿ, ವೈರಾಗ್ಯವೆಂಬ ಸರ್ವಸ್ವವನ್ನೂ ತನ್ನ ವಶಮಾಡಿಕೊಂಡು ಆತ್ಮಾನಂದದ ಮಹಿಮೆಯೆಂಬ ಈ ಸ್ವಾರಾಜ್ಯದಲ್ಲಿ[2] ಯತಿರಾಜನು ವಿರಾಜಿಸುತ್ತಿರುವನು.

1. ತಾನು ಎಂಥ ಜ್ಞಾನಿಯೆಂಬುವನ್ನು ತೋರಿಸಿಕೊಳ್ಳದೆ, ವ್ಯವಹಾರದ ಮಾತುಗಳಿಗೆ ಕಿವಿಗೊಡದೆ, ಲೌಕಿಕದೃಶ್ಯಗಳನ್ನು ಸತ್ಯಬುದ್ಧಿಯಿಂದ ಕಾಣದೆ

2. "ಸ ಸ್ವರಾಡ್ಭವತಿ" ಎಂಬ ಛಾಂ. ೭-೨೫-೨ರ ಭಾವ

ಸವಿತರ್ಯಪಿ ಶೀತರುಚೌ
ಚನ್ದ್ರೇ ತೀಕ್ಷ್ಣೇಽಪ್ಯಧೋ ವಹತ್ಯಗ್ನೌ ।
ಮಾಯಿಕಮಿದಮಿತಿ ಜಾನನ್
ಜೀವನ್ಮುಕ್ತೋ ನ ವಿಸ್ಮಯೀ ಭವತಿ ॥ ೧೮ ॥

೧೮. ಸೂರ್ಯನು ಶೀತಕಿರಣನಾದರೂ ಚಂದ್ರನು ಉಷ್ಣನಾದರೂ ಬೆಂಕಿಯು ಕೆಳಕ್ಕೆ ಉರಿದರೂ ಇದೆಲ್ಲ ಮಾಯಿಕವೇ - ಎಂದು ತಿಳಿದವನಾಗಿರುವ ಜೀವನ್ಮುಕ್ತನು ಎಂದಿಗೂ ಆಶ್ಚರ್ಯಪಡುವದಿಲ್ಲ.[1]

ಅಜ್ಞಾನವೈರಿವಿಜಯೀ
ಪ್ರಜ್ಞಾಮಾತಙ್ಗಮಸ್ತಕಾರೂಢಃ ।
ವಿಹರತಿ ಸಂಯಮಿರಾಜಃ
ಸಮರಸಸುಖಧಾಮ್ನಿ ಸರ್ವತೋ ರಮ್ಯೇ ॥ ೧೯ ॥

೧೯. ಅಜ್ಞಾನವೆಂಬ ಶತ್ರುವನ್ನು ಜಯಿಸಿ, ಪ್ರಜ್ಞೆಯೆಂಬ ಮದ್ದಾನೆಯ ಮಸ್ತಕವನ್ನು ಹತ್ತಿದವನಾಗಿ, ಸಂಯಮಿರಾಜನು ಎಲ್ಲಾ ಬಗೆಯಿಂದಲೂ ರಮ್ಯವಾಗಿರವ ಒಂದೇ ವಿಧವಾಗಿರುವ ಆನಂದಧಾಮದಲ್ಲಿ ವಿಹರಿಸುತ್ತಿರುವನು.

ಶಾನ್ತಾಹಂಕೃತಿದೋಷಃ
ಸುಸಮಾಹಿತಮಾನಸಃ ಕೋಽಪಿ ।
ಪೂರ್ಣೇನ್ದುಶಿಶಿರಭಾವೋ
ರಾಜತ್ಯಾನನ್ದಸತ್ಯಚಿದ್ರಸಿಕಃ ॥ ೨೦ ॥

೨೦. ಅಹಂಕಾರವೆಂಬ ದೋಷವನ್ನು ಶಮನಮಾಡಿಕೊಂಡು ಮನಸ್ಸನ್ನು ಸಂಪೂರ್ಣವಾಗಿ ಸಮಾಧಾನಗೊಳಿಸಿಕೊಂಡಿರುವ[2] ಸಚ್ಚಿದಾನಂದ

---

1. ಪ್ರಪಂಚದಲ್ಲಿ ಸತ್ಯತ್ವಬುದ್ಧಿಯುಳ್ಳ ಕಾಮಬದ್ಧನಿಗೆ ಮೋಹವೇ.
2. ಆತ್ಮನಲ್ಲಿಯೇ ನಿಲ್ಲಿಸಿಕೊಂಡಿರುವ.

ರೂಪದಲ್ಲಿ ರಸಿಕನಾದ ಯಾವನೋ ಒಬ್ಬನು ಪೂರ್ಣಚಂದ್ರನಂತೆ ಶೀತಲಸ್ವಭಾವನಾಗಿ ಪ್ರಕಾಶಿಸುತ್ತಿರುವನು.

ತಿಷ್ಠನ್ ಪರತ್ರ ಧಾಮ್ನಿ
ಸ್ವೀಯಸುಖಾಸ್ವಾದಪರವಶಃ ಕಶ್ಚಿತ್ ।
ಕ್ವಾಪಿ ಧ್ಯಾಯತಿ ಕುಹಚಿ -
ದ್ಗಾಯತಿ ಕುತ್ರಾಪಿ ನೃತ್ಯತಿ ಸ್ವೈರಮ್ ॥ ೨೧ ॥

೨೧. ಪರಮಧಾಮದಲ್ಲಿ ನಿಂತು[1] ತನ್ನ ಆನಂದದ ಸವಿಯಿಂದ ಪರವಶನಾಗಿರುವ ಯಾವನೋ ಒಬ್ಬನು, ಕೆಲಹೊತ್ತು ಧ್ಯಾನಮಾಡುತ್ತಿರುವನು, ಕೆಲಹೊತ್ತು ಗಾನಮಾಡುತ್ತಿರುವನು, ಕೆಲಹೊತ್ತು ಸ್ವೇಚ್ಛೆಯಿಂದ ಕುಣಿಯುತ್ತಿರುವನು.[2]

ಅಗೃಹೀತಾಘಕಲಙ್ಕಃ
ಪ್ರಶಮಿತಸಂಕಲ್ಪವಿಭ್ರಮಃ ಪ್ರಾಜ್ಞಃ ।
ನ್ಯಕ್ಕೃತಕಾರ್ಯಕಲಾಪ-
ಸ್ತಿಷ್ಠತ್ಯಾಪೂರ್ಣಸೀಮನಿ ಸ್ವೈರಮ್ ॥ ೨೨ ॥

೨೨. ಪಾಪವೆಂಬ ಕಲಂಕವನ್ನು ಹೊಂದದೆ, ಸಂಕಲ್ಪವೆಂಬ ಭ್ರಾಂತಿಯನ್ನು ಶಮನಮಾಡಿಕೊಂಡು ಪ್ರಾಜ್ಞನಾದವನು, ಕರ್ಮಸಮೂಹವನ್ನೇ ತಿರಸ್ಕರಿಸಿದವನಾಗಿ ಪರಿಪೂರ್ಣಸ್ಥಿತಿಯಲ್ಲಿ ಸ್ವೇಚ್ಛೆಯಿಂದ ನಿಂತಿರುವನು.

ಚಪಲಂ ಮನಃಕುರಙ್ಗಂ
ಚಾರು ಗೃಹೀತ್ವಾ ವಿಮರ್ಶವಾಗುರಯಾ ।
ನಿಗಮಾರಣ್ಯವಿಹಾರ-
ಶ್ರಾನ್ತಃ ಶೇತೇ ಸ್ವಧಾಮ್ನಿ ಕೋಽಪ್ಯೇಕಃ ॥ ೨೩ ॥

---

1. ಪರಮಾತ್ಮರೂಪದಿಂದ ನೆಲೆನಿಂತು.
2. ''ಆತ್ಮರತಿರಾತ್ಮಕ್ರೀಡಃ'' ..... ಎಂಬ ಛಾಂ. ೭-೨೫-೨ರ ಭಾವ.

೨೩. ಚಂಚಲವಾದ ಮನಸ್ಸೆಂಬ ಜಿಂಕೆಯನ್ನು ವಿವೇಕವೆಂಬ ಬಲೆಯಲ್ಲಿ ಪೂರ್ಣವಾಗಿ ಹಿಡಿದು, ವೇದಾಂತಾರಣ್ಯದಲ್ಲಿ ವಿಹಾರಮಾಡಿ ಆಯಾಸಪಟ್ಟಿರುವ ಯಾವನೋ ಒಬ್ಬನು ಸ್ವಧಾಮದಲ್ಲಿ ಮಲಗಿರುವನು.

ದಾರುಣಚಿತ್ತವ್ಯಾಘ್ರಂ
ಧೀರಮನಃಖಡ್ಗಧಾರಯಾ ಹತ್ವಾ ।
ಅಭಯಾರಣ್ಯೇ ಕೋऽಪಿ
ಸ್ವೈರವಿಹಾರೀ ಜಯತ್ಯೇಕಃ ॥ ೨೪ ॥

೨೪. ಕ್ರೂರವಾದ ಚಿತ್ತವೆಂಬ ಹುಲಿಯನ್ನು ಧೈರ್ಯದಿಂದ ಕೂಡಿದ ಮನಸ್ಸೆಂಬ ಕತ್ತಿಯ ಅಲುಗಿನಿಂದ ಹೊಡೆದುಹಾಕಿ ಅಭಯದ ಅರಣ್ಯದಲ್ಲಿ ಸ್ವೇಚ್ಛೆಯಾಗಿ ಒಬ್ಬನೇ ಓಡಾಡುತ್ತಿರುವನಾಗಿ ಯಾವನೋ ಒಬ್ಬನು ಒಪ್ಪುತ್ತಿರುವನು.

ಸಜ್ಜನಹೃದಯಸರೋಜೋ-
ನ್ಮೀಲನಕರಧೀಕರಪ್ರಸರಃ ।
ಏಕೋ ಯತಿವರಪೂಷಾ
ನಿರ್ದೋಷಶ್ಚರತಿ ಚಿದ್ಗಗನೇ ॥ ೨೫ ॥

೨೫. ಸಾಧುಗಳ ಹೃದಯಕಮಲವನ್ನು ಅರಳಿಸುವ ಅಂತಃಕರಣ ಕಿರಣಸಮೂಹವುಳ್ಳವನಾಗಿ ಯಾವನೋ ಒಬ್ಬ ಯತಿಶ್ರೇಷ್ಠನೆಂಬ ಸೂರ್ಯನು ಯಾವ ದೋಷವೂ (ಕತ್ತಲೆಯೂ) ಇಲ್ಲದೆ ಚಿದಾಕಾಶದಲ್ಲಿ ಸಂಚರಿಸುತ್ತಿರುವನು.

ಕುವಲಯವಿಕಾಸಕಾರಣ-
ಮಜ್ಞಾನಧ್ವಾನ್ತಕೌಮುದೀಪ್ರಾಜ್ಞಃ ।
ಶುದ್ಧೋ ಮುನೀನ್ದ್ರಚನ್ದ್ರಃ
ಸುರಸೇವ್ಯೋ ಲಸತಿ ವಿಷ್ಣುಪದೇ ॥ ೨೬ ॥

೨೬. ಕುವಲಯ (= ನೈದಿಲೆ, ಭೂಮಂಡಲ)ದ ಅರಳುವಿಕೆಗೆ ಕಾರಣನಾಗಿ ಅಜ್ಞಾನವೆಂಬ ಕತ್ತಲೆಗೆ ಬೆಳದಿಂಗಳಂತಿರುವ ಪ್ರಜ್ಞೆಯುಳ್ಳವನಾಗಿ ಶುದ್ಧನಾಗಿರುವ ಮುನಿಶ್ರೇಷ್ಠನೆಂಬ ಚಂದ್ರನು ದೇವತೆಗಳಿಂದ ಸೇವಿತವಾಗಿರುವ ವಿಷ್ಣುಪದದಲ್ಲಿ (ಆಕಾಶದಲ್ಲಿ, ಪರಮಾತ್ಮಸ್ಥಿತಿಯಲ್ಲಿ) ಬೆಳಗುತ್ತಿರುವನು.

ಸ್ವಾನನ್ದಾಮೃತಸೇಕೈ-
　　ರಾನ್ತರಸನ್ತಾಪಸನ್ತತಿಂ ಶಮಯನ್ ।
ಚಿತ್ರಮಚಞ್ಚಲವೃತ್ತಿ -
　　ಶ್ಚಿದ್ವ್ಯೋಮನಿ ಭಾತಿ ಯೋಗಿವರ್ಯಘನಃ ॥ ೨೭ ॥

೨೭. ಆತ್ಮಾನಂದದ ಅಮೃತದ ಅಭಿಷೇಕದಿಂದ ಒಳಗಿನ ಸಂತಾಪವನ್ನೆಲ್ಲ ಶಾಂತಿಗೊಳಿಸಿಕೊಳ್ಳುತ್ತಾ, ಚಿದಾಕಾಶದಲ್ಲಿ ಯೋಗಿವರ್ಯನೆಂಬ ಮೋಡವು ಸ್ವಲ್ಪವೂ ಚಂಚಲವಿಲ್ಲದ ವೃತ್ತಿಯೊಂದೊಡಗೂಡಿ ಬೆಳಗುತ್ತಿರುವದು. ಏನು ಆಶ್ಚರ್ಯವು!

ಸುಮನಃಸೌರಭಮಞ್ಜುಲ
　　ಸಂಚಾರನಿವಾರಿತಾಖಿಲಶ್ರಾನ್ತಿಃ ।
ಸಂಯಮಿಚಾರುಸಮೀರೋ
　　ವಿರಹತ್ಯಾನನ್ದಸಂವಿದಾರಾಮೇ ॥ ೨೮ ॥

೨೮. ಸುಮನದ (ಪುಷ್ಪದ ಒಳ್ಳೆಯ ಮನಸ್ಸಿನ) ಕಂಪಿನಿಂದ ಮನೋಹರವಾಗಿ ಸಂಚರಿಸುವದರಿಂದ ಎಲ್ಲರ ಆಯಾಸವನ್ನೂ ಪರಿಹರಿಸುತ್ತಾ, ಸಂಯಮಿಯೆಂಬ ಮಂದಮಾರುತವು ಆನಂದಜ್ಞಾನವೆಂಬ ಉದ್ಯಾನದಲ್ಲಿ ಸುಳಿದಾಡುತ್ತಿರುವದು.

ನಿಃಶ್ರೇಯಸಸರಸಫಲೇ
　　ನಿರ್ಮಲವಿಜ್ಞಾನಪಲ್ಲವಮನೋಜ್ಞೇ ।
ವೀತಭಯೇ ವಿಪಿನತಲೇ
　　ಯತಿಶಿತಿಕಣ್ಠೋ ವಿಭಾತಿ ಕೋऽಪ್ಯೇಕಃ ॥ ೨೯ ॥

೨೯. ಮುಕ್ತಿಯೆಂಬ ರಸಯುಕ್ತವಾದ ಫಲವುಳ್ಳದ್ದಾಗಿಯೂ, ನಿರ್ಮಲವಾದ ವಿಜ್ಞಾನವೆಂಬ ಚಿಗುರಿನಿಂದ ಮನೋಹರವಾಗಿಯೂ, ಯಾವ ಭಯವೂ ಇಲ್ಲದ್ದಾಗಿಯೂ ಇರುವ ಅರಣ್ಯ ಪ್ರದೇಶದಲ್ಲಿ ಯತೀಶ್ವರನೆಂಬ ಯಾವದೋ ಒಂದು ನವಿಲು ಒಪ್ಪುತ್ತಿರುವದು.

ನಿಃಸಾರಭುವನಮರುತಲ-
ಮುತ್ಸಾರ್ಯಾನನ್ದಸಾರರಸಪೂರ್ಣೇ ।
ವರಸರಸಿ ಚಿನ್ಮಯೇಽಸ್ಮಿನ್
ಪರಹಂಸಃ ಕೋಽಪಿ ದೀವ್ಯತಿ ಸ್ವೈರಮ್ ॥ ೩೦ ॥

೩೦. ಯಾವ ಸಾರವೂ ಇಲ್ಲದ ಭೂಮಿಯೆಂಬ ಮರುಭೂಮಿಯನ್ನು ಬಿಟ್ಟು ಆನಂದದ ಸಾರದ ರಸದಿಂದ ತುಂಬಿರುವ ಚಿನ್ಮಯಸರೋವರ ಶ್ರೇಷ್ಠದಲ್ಲಿ ಯಾವದೋ ಒಂದು ಪರಹಂಸವು ಸ್ವೇಚ್ಛೆಯಿಂದ ವಿಹರಿಸುತ್ತಿರುವದು.

ನಿಖಿಲಾಗಮಪಲ್ಲವಿತೇ
ನಿಗಮಶಿರಸ್ತನ್ತ್ರಶೀತಲೋದ್ಯಾನೇ ।
ಮಧುರತರಮಞ್ಜುವಾಚಃ
ಕೂಜನ್ನಾಸ್ತೇ ಯತೀನ್ದ್ರಕಲಕಣ್ಠಃ ॥ ೩೧ ॥

೩೧. ಸಮಸ್ತ ಆಗಮಗಳೆಂಬ ಚಿಗುರುಗಳಿಂದೊಡಗೂಡಿ ವೇದಾಂತ ಸಿದ್ಧಾಂತದಿಂದ ಶೀತಲವಾಗಿರುವ ಉದ್ಯಾನದಲ್ಲಿ ಮನೋಹರಯತೀಂದ್ರ ನೆಂಬ ನವಿಲು ಮನೋಹರವಾಗಿಯೂ ಬಹಳ ಇಂಪಾಗಿಯೂ ಇರುವ ಧ್ವನಿಯಿಂದ ಕೂಗುತ್ತಿರುವದು.

ದಾರಿತಮೋಹಮದೇಭೋ
ದೂರೀಕೃತಸಕಲದುರಿತಶಾರ್ದೂಲಃ ।
ವಿಬುಧೋತ್ತಮಸಿಂಹವರೋ
ವಿಹರತ್ಯಾನನ್ದವಿತತಕಾನ್ತಾರೇ ॥ ೩೨ ॥

೩೨. ಮೋಹವೆಂಬ ಮದ್ದಾನೆಯನ್ನು ಸೀಳಿ, ಪಾಪವೆಂಬ ಹುಲಿಗಳನ್ನೆಲ್ಲ ತೊಲಗಿಸಿಕೊಂಡು ಜ್ಞಾನಿಶ್ರೇಷ್ಠನೆಂಬ ಸಿಂಹಶ್ರೇಷ್ಠನು ಆನಂದ ನಿಬಿಡವಾದ ಕಾಡಿನಲ್ಲಿ ವಿಹರಿಸುತ್ತಲಿರುವನು.

ಅಜ್ಞಾನಮೃಗವರೋಜ್ಝಿತ
ವಿಜ್ಞಾನೋತ್ತುಙ್ಗಶಿಖರಿತಲೇ ।
ಮತಿಸಲಿಲಶೀತಲಾಙ್ಗೋ
ಯತಿಮದಕಲಭೋ ವಿರಾಜತೇ ವಿಹರನ್ ॥ ೩೩ ॥

೩೩. ಅಜ್ಞಾನವೆಂಬ ಜಿಂಕೆಗಳು ಬಿಟ್ಟುಹೋದ ವಿಜ್ಞಾನವೆಂಬ ಎತ್ತರವಾದ ಕೋಡುಗಲ್ಲಿನ ಬೆಟ್ಟದ ತಪ್ಪಲಿನಲ್ಲಿ ಬುದ್ಧಿಯೆಂಬ ನೀರಿನಿಂದ ತಂಪಾದ ಮೈಯುಳ್ಳ ಯತಿಯೆಂಬ ಮದ್ದಾನೆಯು ಓಡಾಡುತ್ತಾ ವಿರಾಜಿಸುತ್ತಿರುವದು.

ನಾಸಾಞ್ಚಲನಿಹಿತಾಕ್ಷೋ
ನಾಮಾದಿಭ್ಯೋ ನಿವರ್ತಿತಸ್ವಾನ್ತಃ ।
ತಟಿನೀತಟೇಷು ತತ್ತ್ವಂ
ಧ್ಯಾಯನ್ನಾಸ್ತೇ ಯತಿಃ ಕೋಽಪಿ ॥ ೩೪ ॥

೩೪. ಮೂಗಿನ ತುದಿಯಲ್ಲಿಟ್ಟ ದೃಷ್ಟಿಯುಳ್ಳವನಾಗಿ[1] ನಾಮವೇ ಮುಂತಾದವುಗಳಿಂದ (= ನಾಮರೂಪಕರ್ಮಗಳಿಂದ) ಹಿಂತಿರುಗಿದ ಮನಸ್ಸುಳ್ಳವನಾಗಿ[2] ನದಿಗಳ ದಡದಲ್ಲಿ ತತ್ತ್ವವನ್ನು ಚಿಂತಿಸುತ್ತಾ ಯಾವನೋ ಒಬ್ಬ ಯತಿಯು ಕುಳಿತಿರುವನು.

ಆಶಾವಸನೋ ಮೌನೀ
ನೈರಾಶ್ಯಾಲಂಕೃತಃ ಶಾನ್ತಃ ।
ಕರತಲಭಿಕ್ಷಾಪಾತ್ರ-
ಸ್ತರುತಲನಿಲಯೋ ಮುನಿರ್ಜಯತಿ ॥ ೩೫ ॥

---

1. ದೃಷ್ಟಿಯನ್ನು ಚದರಿಸಿಕೊಳ್ಳದೆ. 2. ಮನಸ್ಸಿನ ವಿಕ್ಷೇಪವನ್ನು ತಪ್ಪಿಸಿಕೊಂಡು.

೩೫. ದಿಗಂಬರನಾಗಿ ಮೌನಿಯಾಗಿ ವಿರಕ್ತಿಯಿಂದ ಅಲಂಕೃತನಾಗಿ ಶಾಂತನಾಗಿ ಅಂಗೈಯೇ ಭಿಕ್ಷಾಪಾತ್ರೆಯಾಗಿ ಮರದ ಬುಡವೇ ಮನೆಯಾಗಿರುವ[1] ಮುನಿಯೊಬ್ಬನು ಒಪ್ಪುತ್ತಿರುವನು.

**ವಿಜನನದೀಕುಞ್ಜಗೃಹೇ**
**ಮಞ್ಜುಲಪುಲಿನೈಕಮಞ್ಜುತರತಲ್ಪೇ ।**
**ಶೇತೇ ಕೋಽಪಿ ಯತೀನ್ದ್ರಃ**
**ಸಮರಸಸುಖಬೋಧವಸ್ತುನಿಸ್ತನ್ದ್ರಃ ॥ ೩೬ ॥**

೩೬. ಯಾವ ಜನರೂ ಇಲ್ಲದ ಬಳ್ಳಿಮನೆಯೊಳಗೆ ಮನೋಹರವಾದ ಮಳಲೊಟ್ಟಿಲೆಂಬುದೊಂದೇ ಉತ್ತಮವಾದ ಮೆತ್ತೆಯುಳ್ಳವನಾಗಿ ಯಾವನೋ ಒಬ್ಬ ಯತೀಂದ್ರನು ಸಮರಸವಾದ ಆನಂದಜ್ಞಾನರೂಪವಾದ ವಸ್ತುವಿನಲ್ಲಿ ಜಾಗರೂಕನಾಗಿ[2] ಮಲಗಿರುವನು.

**ಭೂತಲಮೃದುತರಶಯ್ಯಃ**
**ಶೀತಲವಾತೈಕಚಾಮರಃ ಶಾನ್ತಃ ।**
**ರಾಕಾಹಿಮಕರದೀಪೋ**
**ರಾಜತಿ ಯತಿರಾಜಶೇಖರಃ ಕೋಽಪಿ ॥ ೩೭ ॥**

೩೭. ನೆಲವೆಂಬ ಮೆತ್ತನೆಯ ಹಾಸಿಗೆಯುಳ್ಳವನಾಗಿ, ತಂಗಾಳಿಯೆಂಬುದೊಂದೇ ಚಾಮರವುಳ್ಳವನಾಗಿ ಶಾಂತನಾಗಿ ಪೂರ್ಣೇಂದುವೆಂಬ ದೀಪವುಳ್ಳ ಯತಿರಾಜಶೇಖರನೊಬ್ಬನು ರಾಜಿಸುತ್ತಿರುವನು.

**ವಿಪುಲಶಿಲಾತಲಫಲಕೇ**
**ವಿಮಲಸರಿದ್ವಾರಿಪರಿವೃತೋದಾರೇ ।**
**ಮನ್ದಂ ಮಲಯಜಪವನೇ**
**ವಾತಿ ಪ್ರಸ್ವಪಿತಿ ಕೋಽಪಿ ಯತಿರಾಜಃ ॥ ೩೮ ॥**

---

1. ಯಾವುದೊಂದೂ ತನ್ನದೆಂಬುದಿಲ್ಲದ ಪರಮಹಂಸನಾಗಿ.
2. ಮಲಗಿರುತ್ತಾನೆ ಎಂದದ್ದರಿಂದ ಸುಮ್ಮನೆ ನಿದ್ರಿಸುತ್ತಾನೆಂದು ಭಾವಿಸಬಾರದೆಂದು ಭಾವ.

೩೮. ನಿರ್ಮಲವಾದ ನದೀಜಲವು ಸುತ್ತುವರಿದಿರುವ ಹೆಚ್ಚುಗಾರಿಕೆಯುಳ್ಳ ವಿಶಾಲವಾಗಿರುವ ಹಾಸುಗಲ್ಲಿನ ಮೇಲೆ, ಮಲಯಾನಿಲವು ಮೆಲ್ಲಗೆ ಬೀಸುತ್ತಿರಲು ಯಾವನೋ ಒಬ್ಬ ಯತಿರಾಜನು ನಿದ್ರಿಸುತ್ತಿರುವನು.

ಅನ್ತರಮೇಕಂ ಕಿಂಚಿತ್
ಸನ್ತತಮನುಸನ್ದಧನ್ಮಹಾಮೌನೀ ।
ಕರಪುಟಭಿಕ್ಷಾಮಶ್ನ-
ನ್ನಟತಿ ಹಿ ವೀಥ್ಯಾಂ ಜಡಾಕೃತಿಃ ಕೋಽಪಿ ॥ ೩೯ ॥

೩೯. ತನ್ನೊಳಗಿರುವ ಏಕತ್ವವೊಂದನ್ನು ಯಾವಾಗಲೂ ಅನುಸಂಧಾನ ಮಾಡಿಕೊಳ್ಳುತ್ತಾ ಮಹಾಮೌನಿಯಾಗಿ , ಅಂಗೈಯಲ್ಲಿಟ್ಟ ಭಿಕ್ಷವನ್ನುಣ್ಣುತ್ತಾ ಜಡನಂತಿರುವ ಯಾವನೋ ಒಬ್ಬನು ಬೀದಿಯಲ್ಲಿ ಸಂಚರಿಸುತ್ತಿರುವನು.

ಪ್ರವಿಲಾಪ್ಯ ಜಗದಶೇಷಂ
ಪರಿಶಿಷ್ಟಾಖಣ್ಡವಸ್ತುಪರತನ್ತ್ರಃ ।
ಪ್ರಾಶ್ನಾತಿ ಕಬಲಮಾಸ್ಯೇ
ಪ್ರಾಪ್ತಂ ಪ್ರಾರಬ್ಧಕರ್ಮಣಾ ಕೋಽಪಿ ॥ ೪೦ ॥

೪೦. ಜಗತ್ತೆಲ್ಲವನ್ನೂ ಲಯಮಾಡಿಕೊಂಡು ಉಳಿದಿರುವ ಅಖಂಡ ವಸ್ತುವಿನ ಪರವಶನಾಗಿ, ಯಾವನೋ ಒಬ್ಬನು ಪ್ರಾರಬ್ಧಕರ್ಮದಿಂದ ಬಾಯಿಗೆ ಬಿದ್ದ ಕಬಳವನ್ನು ತಿನ್ನುತ್ತಿರುವನು.

ನಿನ್ದತಿ ಕಿಮಪಿ ನ ಯೋಗೀ
ನನ್ದತಿ ನೈವಾಪರಂ ಕಿಮಪ್ಯನ್ತಃ ।
ಚನ್ದನಶೀತಲಹೃದಯಃ
ಕನ್ದಲಿತಾಸನ್ದಮನ್ಥರಃ ಸ್ವಾಸ್ತೇ ॥ ೪೧ ॥

೪೧. ಯೋಗಿಯಾದವನು ಯಾವದೊಂದನ್ನೂ ನಿಂದಿಸುವದಿಲ್ಲ, ಯಾವದೊಂದನ್ನೂ ಹೊಗಳುವದಿಲ್ಲ ; ಒಳಗೆ ಹೃದಯದಲ್ಲಿ ಚಂದನದಂತೆ

ತಂಪಾಗಿರುವ ಹೃದಯವುಳ್ಳವನಾಗಿ, ಆನಂದನಿರ್ಭರನಾಗಿ ಸುಖ ದಿಂದಿರುವನು.

**ಸಂತ್ಯಜ್ಯ ಶಾಸ್ತ್ರಜಾಲಂ**
**ಸಂವ್ಯವಹಾರಂ ಚ ಸರ್ವತಸ್ತ್ಯಕ್ತ್ವಾ ।**
**ಆಶ್ರಿತ್ಯ ಪೂರ್ಣಪದವೀ-**
**ಮಾಸ್ತೇ ನಿಷ್ಕಮ್ಪದೀಪವದ್ಯೋಗೀ ॥ ೪೨ ॥**

೪೨. ಯೋಗಿಯಾದವನು ಶಾಸ್ತ್ರಸಮೂಹವನ್ನು ಕೈಬಿಟ್ಟು ಎಲ್ಲಾ ಬಗೆಯ ವ್ಯವಹಾರವನ್ನೂ ಕೈಬಿಟ್ಟು[1] ಪೂರ್ಣಪದವಿಯನ್ನು ಆಶ್ರಯಿಸಿದವನಾಗಿ ಅಲುಗಾಡದ ದೀಪದಂತೆ ಇರುವನು.

**ತೃಣಪಙ್ಕಚರ್ಚಿತಾಙ್ಗ-**
**ಸ್ತೃಣಮಿವ ವಿಶ್ವಂ ವಿಲೋಕಯನ್ ಯೋಗೀ ।**
**ವಿಹರತಿ ರಹಸಿ ವನಾನ್ತೇ**
**ವಿಜರಾಮರಭೂಮ್ನಿ ವಿಶ್ರಾನ್ತಃ ॥ ೪೩ ॥**

೪೩. ಯೋಗಿಯಾದವನು ಹುಲ್ಲೂ ಕೆಸರೂ ಅಂಟಿರುವ ಮೈಯುಳ್ಳವನಾಗಿ ಜಗತ್ತನ್ನೇ ಹುಲ್ಲಿಗೆ ಸಮನಾಗಿ ಕಾಣುತ್ತಾ, ಮುಪ್ಪು ಮರಣಗಳಿಲ್ಲದ ಭೂಮವಸ್ತುವಿನಲ್ಲಿ ವಿಶ್ರಾಂತನಾಗಿ ವನಪ್ರದೇಶದಲ್ಲಿ ಏಕಾಂತ ಪ್ರದೇಶದಲ್ಲಿ ವಿಹರಿಸುತ್ತಿರುವನು.

**ಪಶ್ಯತಿ ಕಿಮಪಿ ನ ರೂಪಂ**
**ನ ವದತಿ ನ ಶೃಣೋತಿ ಕಿಂಚಿದಪಿ ವಚನಮ್ ।**
**ತಿಷ್ಠತಿ ನಿರುಪಮಭೂಮನಿ**
**ನಿಷ್ಕಾಮವಲಮ್ಬ್ಯ ಕಾಷ್ಠವದ್ಯೋಗೀ ॥ ೪೪ ॥**

1. ಸಮಸ್ತ ಲೌಕಿಕವೈದಿಕವ್ಯವಹಾರವನ್ನೂ ಬಿಟ್ಟು.

೪೪. ಯೋಗಿಯಾದವನಿಗೆ ಯಾವ ರೂಪವೂ ಕಾಣಿಸದು, ಅವನು ಯಾವ ಮಾತನ್ನೂ ಆಡನು, ಯಾವ ಶಬ್ದವೂ ಅವನಿಗೆ ಕೇಳಿಸದು.[1] ಉಪಮಾನರಹಿತವಾದ ಭೂಮವಸ್ತುವಿನಲ್ಲಿ ನಿಷ್ಠೆಯನ್ನುಹೊಂದಿದವನಾಗಿ ಕಟ್ಟಿಗೆಯಂತೆ ಅಲುಗಾಡದೆ[2] ಇರುವನು.

**ಜಾತ್ಯಭಿಮಾನವಿಹೀನೋ**
**ಜನ್ತುಷು ಸರ್ವತ್ರ ಪೂರ್ಣತಾಂ ಪಶ್ಯನ್ ।**
**ಗೂಢಂ ಚರತಿ ಯತೀನ್ದ್ರೋ**
**ಮೂಢವದಖಿಲಾಗಮಾರ್ಥತತ್ತ್ವಜ್ಞಃ ॥ ೪೫ ॥**

೪೫. ಯತೀಂದ್ರನಾದವನು ಜಾತಿಯ ಅಭಿಮಾನವಿಲ್ಲದೆ, ಪ್ರಾಣಿಗಳಲ್ಲೆಲ್ಲ ಪೂರ್ಣತ್ವವನ್ನೇ ಕಾಣುತ್ತಾ, ಸಕಲ ಆಗಮಗಳ ಅರ್ಥದ ತತ್ತ್ವವನ್ನು ತಿಳಿದವನಾದರೂ ಮೂಢನಂತೆಯೇ[3] ರಹಸ್ಯವಾಗಿ ಓಡಾಡುತ್ತಿರುವನು.

**ಉಪಧಾಯ ಬಾಹುಮೂಲಂ**
**ಪರಿಧಾಯಾಕಾಶಮವನಿಮಾಸ್ತೀರ್ಯ ।**
**ಪ್ರಸ್ವಪಿತಿ ವಿರತಿವನಿತಾಂ**
**ಪರಿರಭ್ಯಾನನ್ದಪರವಶಃ ಕೋಽಪಿ ॥ ೪೬ ॥**

೪೬. ತೋಳನ್ನೇ ತಲೆದಿಂಬುಮಾಡಿಕೊಂಡು, ಆಕಾಶವನ್ನು ಹೊದ್ದುಕೊಂಡು, ಭೂಮಿಯನ್ನು ಹಾಸಿಕೊಂಡು, ವಿರಕ್ತಿಯೆಂಬ ಸ್ತ್ರೀಯನ್ನು ತಬ್ಬಿಕೊಂಡು, ಆನಂದಪರವಶನಾಗಿ ಯಾವನೋ ಒಬ್ಬನು ನಿದ್ರಿಸುತ್ತಿರುವನು.

---

1. ಶಬ್ದಾದಿಗಳೆಲ್ಲವೂ ಅವನ ಪಾಲಿಗೆ ಪರಮಾರ್ಥವಾದ ಬ್ರಹ್ಮವೇ ಆಗಿಬಿಟ್ಟಿರುವದು.
2. ಪರಮಾತ್ಮನಿಗಿಂತ ಬೇರೆ ಯಾವದನ್ನೂ ಕಾಣದ್ದರಿಂದ ತತ್ತ್ವದಲ್ಲಿಯೇ ನಿಂತು.
3. ಮಾಂ.ಕಾ. ೨-೩೬.

ಗತಭೇದವಾಸನಾಭಿಃ
ಸ್ವಪ್ರಜ್ಞೋದಾರವಾರಸಾರೀಭಿಃ ।
ರಮತೇ ಸಹ ಯತಿರಾಜ-
ಸ್ತ್ರಯ್ಯನ್ತಾನ್ತಃಪುರೇ ಕೋಽಪಿ ॥ ೪೭ ॥

೪೭. ಭೇದವಾಸನೆಗಳನ್ನೆಲ್ಲ ಕಳೆದುಕೊಂಡ ಆತ್ಮಪ್ರಜ್ಞೆಗಳೆಂಬ ಅತಿಶಯವುಳ್ಳ ವಾರಸ್ತ್ರೀಯರೊಡನೆ, ವೇದಾಂತವೆಂಬ ಅಂತಃಪುರದಲ್ಲಿ ಯಾವನೋ ಒಬ್ಬ ಯತಿರಾಜನು ರಮಿಸುತ್ತಿರುವನು.

ವೈರಾಗ್ಯವಿಪುಲಮಾರ್ಗಂ
ವಿಜ್ಞಾನೋದ್ದಾಮದೀಪಿತೋದ್ದೀಪ್ತಮ್ ।
ಆರುಹ್ಯ ತತ್ತ್ವಹರ್ಮ್ಯಂ
ಮುಕ್ತ್ಯಾ ಸಹ ಮೋದತೇ ಯತಿರಾಟ್ ॥ ೪೮ ॥

೪೮. ಯತಿರಾಜನಾದವನು ವಿಜ್ಞಾನವೆಂಬ ಶ್ರೇಷ್ಠವಾದ ದೀವಿಗೆಗಳಿಂದ ಬೆಳಗುತ್ತಿರುವ ವೈರಾಗ್ಯವೆಂಬ ವಿಸ್ತಾರವಾದ ಮಾರ್ಗವುಳ್ಳ ತತ್ತ್ವವೆಂಬ ಉಪ್ಪರಿಗೆಯನ್ನು ಏರಿ ಮುಕ್ತಿದೇವಿಯೊಡನೆ ಸುಖ ಪಡುತ್ತಿರುವನು.

ವಿಜನತಲೋತ್ಪಲಮಾಲಾಂ
ವನಿತಾವೈತೃಷ್ಣ್ಯಕಲ್ಪವಲ್ಲೀಂ ಚ ।
ಅಪಮಾನಾಮೃತಘುಟಿಕಾ-
ಮಾತ್ಮಜ್ಞಃ ಕೋಽಪಿ ಗೃಹ್ಣಾತಿ ॥ ೪೯ ॥

೪೯. ಏಕಾಂತವಾಸವೆಂಬ ಉತ್ಪಲಮಾಲಿಕೆಯನ್ನೂ, ಸ್ತ್ರೀಯರಲ್ಲಿ ವಿರಕ್ತಿಯೆಂಬ ಕಲ್ಪವಲ್ಲಿಯನ್ನೂ, ಅಪಮಾನವೆಂಬ ಅಮೃತದ ಗುಡುಗುಡಿಯನ್ನೂ ಆತ್ಮಜ್ಞನಾದ ಯಾವನೋ ಒಬ್ಬನು ಸ್ವೀಕರಿಸುವನು.

ನ ನಿಷೇಧತಿ ದೋಷಧಿಯಾ
ಗುಣಬುದ್ಧ್ಯಾ ವಾ ನ ಕಿಂಚಿದಾದತ್ತೇ ।
ಅವಿದ್ಯಕಮಖಿಲಮಿತಿ
ಜ್ಞಾತ್ವೋದಾಸ್ತೇ ಮುನಿಃ ಕೋಽಪಿ ॥ ೫೦ ॥

೫೦. ಮುನಿಯಾಗಿರುವ ಯಾವನೋ ಒಬ್ಬನು ದೋಷವೆಂದು ಯಾವದನ್ನೂ ಬಿಡದಿರುವನು, ಗುಣಬುದ್ಧಿಯಿಂದ ಯಾವದನ್ನೂ ಸ್ವೀಕರಿಸದಿರುವನು ; ಇದೆಲ್ಲ ಅವಿದ್ಯಾಕೃತವೆಂದು ತಿಳಿದು ಉದಾಸೀನನಾಗಿರುವನು.

ಭೂತಂ ಕಿಮಪಿ ನ ಮನುತೇ
ಭಾವಿ ಚ ಕಿಂಚಿನ್ನ ಚಿನ್ತಯತ್ಯನ್ತಃ ।
ಪಶ್ಯತಿ ನ ಪುರೋವರ್ತ್ಯಪಿ
ವಸ್ತು ಸಮಸ್ತಾರ್ಥಸಮರಸಃ ಕೋಽಪಿ ॥ ೫೧ ॥

೫೧. ತತ್ತ್ವವೊಂದರಲ್ಲಿಯೇ ಸರ್ವಪದಾರ್ಥಗಳ ಸಾಮರಸ್ಯವನ್ನೂ ಕಾಣಬಲ್ಲ ಯಾವನೋ ಒಬ್ಬನು - ಹಿಂದೆ ಆದದ್ದನ್ನು ಯೋಚಿಸುವದಿಲ್ಲ, ಮುಂದೆ ಆಗುವದನ್ನು ಒಳಗೆ ಆಲೋಚಿಸನು, ಈಗ ಎದುರಿಗಿರುವದನ್ನೂ ಕಾಣದೆ ಇರುವನು.[1]

ನಿಗೃಹೀತಾಖಿಲಕರಣೋ
ನಿರ್ಮುಕ್ತಾಶೇಷವಿಷಯೇಹಃ ।
ತೃಪ್ತಿಮನುತ್ತಮಸೀಮಾಂ
ಪ್ರಾಪ್ತಃ ಪರ್ಯಟತಿ ಕೋಽಪಿ ಯತಿವರ್ಯಃ ॥ ೫೨ ॥

೫೨. ಯತಿಶ್ರೇಷ್ಠನಾಗಿರುವ ಯಾವನೋ ಒಬ್ಬನು, ಸಮಸ್ತಕರಣಗಳನ್ನೂ ಬಿಗಿಹಿಡಿದುಕೊಂಡವನಾಗಿ, ವಿಷಯಕ್ಕಾಗಿ ಮಾಡುವ ಪ್ರಯತ್ನವೇನೂ ಇಲ್ಲದವನಾಗಿ ತೃಪ್ತಿಯ ತೀರ ಕಡೆಯ ಎಲ್ಲೆಗಟ್ಟನ್ನು ಪಡೆದು ಸಂಚರಿಸುತ್ತಿರುವನು.

---

1. ಎಲ್ಲವನ್ನೂ ಕಾಲತ್ರಯಾತೀತವಾದ ತತ್ತ್ವವೆಂದೇ ಕಾಣುತ್ತಿರುವನು.

ಸಂತ್ಯಜತಿ ನೋಪಪನ್ನಂ
ನಾಸಂಪನ್ನಂ ಚ ವಾಞ್ಛತಿ ಕ್ವಾಪಿ ।
ಸ್ವಸ್ಥಃ ಶೇತೇ ಯತಿರಾ-
ಡಾನ್ತರಮಾನನ್ದಮನುಭವನ್ನೇಕಃ ॥ ೫೩ ॥

೫೩. ಪ್ರಾಪ್ತವಾದದ್ದನ್ನು ಬಿಡುವದೂ ಇಲ್ಲ, ಸಿಕ್ಕದೆ ಇರುವದನ್ನು ಎಂದಿಗೂ ಬಯಸುವದೂ ಇಲ್ಲ[1]; ತನ್ನೊಳಗಿರುವ ಆನಂದವನ್ನೇ ಅನುಭವಿಸುತ್ತಾ ಯತಿರಾಜನಾದ ಒಬ್ಬಾನೊಬ್ಬನು ಸ್ವಸ್ಥನಾಗಿ ಮಲಗಿರುವನು.

ಕಾಮಪಿ ವಿಮಲಾಂ ಪದವೀ-
ಮಾಸಾದ್ಯಾನನ್ದಸಂವಿದುನ್ನಿದ್ರಾಮ್ ।
ಆಸ್ತೇ ಭಿಕ್ಷುಕ ಏಕೋ
ವಿಹರನ್ನಿರ್ಮುಕ್ತಬನ್ಧನಃ ಸ್ವೈರಮ್ ॥ ೫೪ ॥

೫೪. ಆನಂದಜ್ಞಾನರೂಪವಾಗಿ ಜಾಗರೂಕವಾಗಿರುವ ಒಂದು ಬಗೆಯ ನಿರ್ಮಲವಾದ ಪದವಿಯನ್ನು ಪಡೆದು, ಯಾವನೋ ಒಬ್ಬ ಭಿಕ್ಷುಕನು ಬಂಧನದಿಂದ ಬಿಡುಗಡೆಯಾಗಿ ಸ್ವೇಚ್ಛೆಯಿಂದಿರುವನು.

ವಸ್ತುನ್ಯಸ್ತಮಿತಾಖಿಲ-
ವಿಶ್ವವಿಹಾರೇ ವಿಲೀನಮನಾಃ ।
ರಾಜತಿ ಪರಾನಪೇಕ್ಷೋ
ರಾಜಾಖಿಲವೀತರಾಗಾಣಾಮ್ ॥ ೫೫ ॥

೫೫. ಸಮಸ್ತಪ್ರಪಂಚವ್ಯವಹಾರವೂ ಅಸ್ತಮಿತವಾಗಿರುವ ವಸ್ತುವಿನಲ್ಲಿ ಮನಸ್ಸನ್ನು ಲಯಮಾಡಿಕೊಂಡವನಾಗಿ ವೀತರಾಗರೆಲ್ಲರಿಗೂ ರಾಜನಾದವನು ಮತ್ತೊಂದರ ಅಪೇಕ್ಷೆಯಿಲ್ಲದೆ ರಾಜಿಸುತ್ತಿರುವನು.

---

1. ಗೀತಾ. ೧೪-೨೨

ಆಚಾರ್ಯಾಪಾಙ್ಗದೃಶಾ
ಸಮವಾಪ್ತಾಪಾರಸಂವಿದಾಕಾರಃ ।
ಪ್ರಶಮಿತಸಕಲವಿಭೇದಃ
ಪರಹಂಸಃ ಕಶ್ಚಿದಾಭಾತಿ ॥ ೫೬ ॥

೫೬. ಯಾವನೋ ಒಬ್ಬ ಪರಮಹಂಸನು ಆಚಾರ್ಯರ ಕಡೆಗಣ್ಣಿನ ನೋಟದಿಂದಲೇ ಅನಂತಜ್ಞಾನಸ್ವರೂಪವನ್ನು ಪಡೆದವನವಾಗಿ ಸಕಲ ಭೇದಗಳನ್ನೂ ಶಾಂತಿಗೊಳಿಸಿಕೊಂಡು ಬೆಳಗುತ್ತಿರುವನು.

ವರ್ಣಾಶ್ರಮವ್ಯವಸ್ಥಾ-
ಮುತ್ತೀರ್ಯ ವಿಧೂಯ ವಿಧ್ಯಾದೀನ್ ।
ಪರಿಶಿಷ್ಯತೇ ಯತೀನ್ದ್ರಃ
ಪರಿಪೂರ್ಣಾನನ್ದಬೋಧಮಾತ್ರೇಣ ॥ ೫೭ ॥

೫೭. ವರ್ಣಾಶ್ರಮವ್ಯವಸ್ಥೆಯನ್ನು ದಾಟಿದವನಾಗಿ, ವಿಧಿಯೇ ಮುಂತಾದವನ್ನು (ವಿಧಿ, ನಿಷೇಧ, ಸ್ವೇಚ್ಛಾಚಾರಗಳನ್ನು) ಕೊಡವಿಹಾಕಿದ[1] ಯತೀಂದ್ರನು ಪರಿಪೂರ್ಣವಾದ ಆನಂದಜ್ಞಾನಮಾತ್ರರೂಪದಿಂದ ಉಳಿದು ಕೊಂಡಿರುವನು.

ಕ್ಷಯಮುಪನೀಯ ಸಮಸ್ತಂ
ಕರ್ಮ ಪ್ರಾರಬ್ಧಮುಪಭುಜ್ಯ ।
ಪ್ರವಿಗಲಿತದೇಹಬನ್ಧಃ
ಪ್ರಾಜ್ಞೋ ಬ್ರಹ್ಮೈವ ಕೇವಲಂ ಭವತಿ ॥ ೫೮ ॥

೫೮. ಸಮಸ್ತಕರ್ಮವನ್ನೂ ನಾಶಗೊಳಿಸಿಕೊಂಡು ಪ್ರಾರಬ್ಧಕರ್ಮದ ಫಲವನ್ನು ಅನುಭವಿಸಿದವನಾಗಿ ದೇಹದ ಬಂಧವನ್ನು ಸಡಿಲ ಮಾಡಿ

---

1. ಅಧ್ಯಾಸವನ್ನು ಆಶ್ರಯಿಸಿ ಉಂಟಾಗಿರುವ ವರ್ಣಾಶ್ರಮಗಳೂ ಅವುಗಳ ನ್ನಾಶ್ರಯಿಸಿರುವ ವಿಧ್ಯಾದಿಗಳೂ ನಾನು ಬ್ರಹ್ಮವೇ ಎಂಬ ಜ್ಞಾನವಾದ ಬಳಿಕ ಇರುವದಿಲ್ಲ ; ಆಮೇಲೆ ಯಾವ ಕರ್ಮವೂ ಇಲ್ಲ. ಸೂ. ಭಾ. ೧-೧-೪ರ ಉಪಸಂಹಾರ ವಾಕ್ಯವನ್ನು ನೋಡಿರಿ.

ಕೊಂಡು ಪ್ರಾಜ್ಞನಾದವನು ಕೇವಲ ಬ್ರಹ್ಮವೇ ಆಗಿರುವನು.[1]

**ಸ್ತಿಮಿತಮನನ್ತಮನಾದ್ಯಂ**
**ಸನ್ತತಮಾನನ್ದಬೋಧಘನಮ್ ।**
**ಅವಿಕಲ್ಪಮಾದ್ಯಮೇಕಂ**
**ಸನ್ಮಾತ್ರಂ ವಿದ್ಯತೇ ಕಿಮಪಿ ॥ ೫೯ ॥**

೫೯. ಚಾಂಚಲ್ಯವಿಲ್ಲದ್ದಾಗಿ ಆದಿಯಿಲ್ಲದೆ ಅಂತವಿಲ್ಲದೆ ಎಡೆಬಿಡದ ಆನಂದಜ್ಞಾನದ ಗಟ್ಟಿಯಾಗಿ (ನಾಮ, ಜಾತಿ, ದ್ರವ್ಯ , ಗುಣ, ಕ್ರಿಯೆ-ಮುಂತಾದ) ಯಾವ ವಿಕಲ್ಪವೂ ಇಲ್ಲದೆ, ಎಲ್ಲಕ್ಕೂ ಆದಿಯಾಗಿ ಅದ್ವಿತೀಯವಾಗಿರುವ ಒಂದಾನೊಂದು ಬರಿಯಿರವು ಇದ್ದುಕೊಂಡಿರುವದು.

**ಅಕ್ಷರಮಜರಮಜಾತಂ**
**ಸೂಕ್ಷ್ಮತರಾಪೂರ್ವಶುದ್ಧವಿಜ್ಞಾನಮ್ ।**
**ಪ್ರಗಲಿತಸರ್ವಕ್ಲೇಶಂ**
**ಪರತತ್ತ್ವಂ ವರ್ತತೇ ಕಿಮಪಿ ॥ ೬೦ ॥**

೬೦. ನಾಶರಹಿತವಾಗಿ ಮುಪ್ಪಿಲ್ಲದ್ದಾಗಿ ಜನ್ಮವಿಲ್ಲದ್ದಾಗಿ ಎಲ್ಲಕ್ಕೂ ಸೂಕ್ಷ್ಮವಾಗಿ ನಿರ್ಹೇತುಕವಾದ ಶುದ್ಧವಿಜ್ಞಾನವಾಗಿ (ಅವಿದ್ಯೆಯೇ ಮುಂತಾದ) ಯಾವ ಬಗೆಯ ಕ್ಲೇಷಗಳೂ ಇಲ್ಲದಿರುವ ಒಂದಾನೊಂದು ಪರಮತತ್ತ್ವವು ಇರುವದು.

**ಸುಖತರಮಮರಮದೂರಂ**
**ಸಾರಂ ಸಂಸಾರವಾರಿಧೇಸ್ತೀರಮ್ ।**
**ಸಮರಸಮಭಯಮಪಾರಂ**
**ತತ್ಕಿಂಚನ ವಿದ್ಯತೇ ತತ್ತ್ವಮ್ ॥ ೬೧ ॥**

೬೧. ಪರಮಾನಂದಮಯವಾಗಿಯೂ ಸಾವಿಲ್ಲದ್ದಾಗಿಯೂ ದೂರವಿಲ್ಲದೆ ಸಮ್ಮಲ್ಲಿಯೇ ಇರುವ ಸಾರವಾಗಿ, ಸಂಸಾರಸಮುದ್ರದ ದಡವಾಗಿ, ಸಮರಸವಾಗಿ, ಭಯರಹಿತವಾಗಿ, ಪಾರವಿಲ್ಲದ ಒಂದಾನೊಂದು ತತ್ತ್ವವು ಇರುವದು.

---
1. ಸೂ. ಭಾ. ೪-೧-೧೪, ೧೫ ಇವನ್ನು ನೋಡಿರಿ.

ಅರಸಮಗನ್ಧಮರೂಪಂ
ವಿರಜಸ್ಕಮಸತ್ತ್ವಮತಮಸ್ಕಮ್ ।
ನಿರುಪಮನಿರ್ಭಯತತ್ತ್ವಂ
ತತ್ಕಿಮಪಿ ದ್ಯೋತತೇ ನಿತ್ಯಮ್ ॥ ೬೨ ॥

೬೨. ಸವಿಯಿಲ್ಲದೆ ವಾಸನೆಯಿಲ್ಲದೆ ರೂಪವಿಲ್ಲದೆ, ಸತ್ತ್ವವಿಲ್ಲದೆ ರಜಸ್ಸಿಲ್ಲದೆ ತಮಸ್ಸಿಲ್ಲದೆ, ಯಾವ ಉಪಮಾನವೂ ಇಲ್ಲದೆ ನಿರ್ಭಯವಾಗಿರುವ ತತ್ತ್ವವೊಂದು ಯಾವಾಗಲೂ ಬೆಳಗುತ್ತಲಿರುವದು.[1]

ಇತಿ ಗುರುಕರುಣಾಪಾಙ್ಗಾದಾರ್ಯಾಭಿರ್ದ್ವ್ಯಧಿಕಷಷ್ಟಿಸಂಖ್ಯಾಭಿಃ ।
ನಿರವದ್ಯಾಭಿರವೋಚಂ ನಿಗಮಶಿರಸ್ತನ್ತ್ರಸಾರಭೂತಾರ್ಥಮ್ ॥ ೧॥

೧. ಹೀಗೆ ಗುರುಕರುಣಾಕಟಾಕ್ಷದಿಂದ ಉತ್ತಮವಾದ ಅರುವತ್ತೆರಡು ಆರ್ಯಗಳಿಂದ ವೇದಾಂತಶಾಸ್ತ್ರದ ಸಾರಭೂತವಾದ ಅರ್ಥವನ್ನು ಹೇಳಿರುತ್ತೇನೆ.

ಗದಿತಮಿಮಮಾತ್ಮವಿದ್ಯಾವಿಲಾಸಮನುವಾಸರಂ ಸ್ಮರನ್ವಿಬುಧಃ ।
ಪರಿಣತಪರಾತ್ಮವಿದ್ಯಃ ಪ್ರಪದ್ಯತೇ ಸಪದಿ ಪರಮಾರ್ಥಮ್ ॥

೨. ಇಲ್ಲಿ ಹೇಳಿರುವ ಆತ್ಮವಿದ್ಯಾವಿಲಾಸವನ್ನು ಪ್ರತಿದಿನವೂ ಸ್ಮರಣೆಮಾಡುವ ಜಾಣನು ಪರಮಾತ್ಮವಿದ್ಯೆಯಲ್ಲಿ ನಿಪುಣನಾಗಿ ಕೂಡಲೇ ಪರಮಾರ್ಥವನ್ನು ಪಡೆಯುತ್ತಾನೆ.[2]

ಪರಮಶಿವೇನ್ದ್ರ ಶ್ರೀಗುರುಶಿಷ್ಯೇಣೇತ್ಥಂ ಸದಾಶಿವೇನ್ದ್ರೇಣ ।
ರಚಿತೇಯಮಾತ್ಮವಿದ್ಯಾವಿಲಾಸನಾಮ್ನೀ ಕೃತಿಃ ಪೂರ್ಣಾ ॥ ೩॥

೩. ಇಂತು ಪರಮಶಿವೇಂದ್ರರೆಂಬ ಸದ್ಗುರುಗಳ ಶಿಷ್ಯನಾದ ಸದಾಶಿವೇಂದ್ರನಿಂದ ರಚಿತವಾದ ಆತ್ಮವಿದ್ಯಾವಿಲಾಸವೆಂಬ ಈ ಕೃತಿಯು ಪೂರ್ಣವಾಯಿತು.

---

1. ಬೃ.ಸೂ. ೩-೩-೧೦,೩೩. - ಇವುಗಳಲ್ಲಿ ಹೇಳಿರುವಂತೆ ಬ್ರಹ್ಮದ ವಿಧಿರೂಪದ ಮತ್ತು ನಿಷೇಧರೂಪದ ವಿಶೇಷಣಗಳನ್ನೆಲ್ಲವನ್ನೂ ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

2. ಏಕೆಂದರೆ ಜ್ಞಾನಪ್ರಾಪ್ಯವಾದ ವಸ್ತು ನಿತ್ಯಪ್ರಾಪ್ತವಾಗಿರುತ್ತದೆ.

# ಶ್ರೀಸದಾಶಿವೇಂದ್ರರ ಕೆಲವು ಕೀರ್ತನೆಗಳು

## ೧. ಎಲ್ಲವೂ ಬ್ರಹ್ಮಮಯವು

ರಾಗ - ನವರೋಜ್

ಸರ್ವಂ ಬ್ರಹ್ಮಮಯಮ್ । ರೇರೇ । ಸರ್ವಂ.... ॥ ಧ್ರುವ ॥

ಕಿಂ ವಚನೀಯಮ್ । ಕಿಮವಚನೀಯಮ್ ।
ಕಿಂ ರಚನೀಯಮ್ । ಕಿಮರಚನೀಯಮ್ ॥ ೧ ॥

ಕಿಂ ಪಠನೀಯಮ್ । ಕಿಮಪಠನೀಯಮ್ ।
ಕಿಂ ಭಜನೀಯಮ್ । ಕಿಮಭಜನೀಯಮ್ । ॥ ೨ ॥

ಕಿಂ ಭೋದ್ಧವ್ಯಮ್ । ಕಿಮಬೋದ್ಧವ್ಯಮ್
ಕಿಂ ಭೋಕ್ತವ್ಯಮ್ । ಕಿಮಭೋಕ್ತವ್ಯಮ್ । ॥ ೩ ॥

ಸರ್ವತ್ರ ಸದಾ ಹಂಸಧ್ಯಾನಮ್ ।
ಕರ್ತವ್ಯಂ ಭೋ ಮುಕ್ತಿನಿದಾನಮ್ ॥ ೪ ॥

## ೨. ಜೀವತ್ವವು ಬ್ರಹ್ಮದಲ್ಲಿ ಕಲ್ಪಿತ

ರಾಗ - ನವರೋಜ್

ತದ್ವಜ್ಜೀವತ್ವಂ, ಬ್ರಹ್ಮಣಿ । ತದ್ವಜ್ಜೀವತ್ವಮ್ ॥ ಧ್ರುವ ॥

ಯದ್ವತ್ತೋಯೇ ಚಂದ್ರದ್ವಿತ್ವಂ ।
ಯದ್ವನ್ಮುಕುರೇ ಪ್ರತಿಬಿಮ್ಬತ್ವಮ್ ॥ ೧ ॥

ಸ್ಥಾಣೌ ಯದ್ವನ್ನರರೂಪತ್ವಮ್ ।
ಭಾನುಕರೇ ಯದ್ವತ್ತೋಯತ್ವಮ್ ॥ ೨ ॥

ಶುಕ್ತೌ ಯದ್ವದ್ರಜತಮಯತ್ವಮ್ ।
ರಜ್ಜೌ ಯದ್ವತ್ ಫಣಿದೇಹತ್ವಮ್ ॥ ೩ ॥

ಪರಮಹಂಸಗುರುಣಾದ್ವಯವಿದ್ಯಾ ।
ಫಣಿತಾ ಧಿಕ್ಕೃತಮಾಯಾವಿದ್ಯಾ ॥ ೪ ॥

## ೩. ಇಂಥವರಿಗೆ ಚಿಂತೆಯಿಲ್ಲ

ರಾಗ - ಕಾಂಬೋದಿ

ಚಿನ್ತಾ ನಾಸ್ತಿ ಕಿಲ । ತೇಷಾಮ್ ॥ ಧ್ರುವ ॥

ಶಮದಮಕರುಣಾಸಂಪನ್ನಾನಾಮ್ ।
ಸಾಧುಸಮಾಗಮಸಂಕೀರ್ಣಾನಾಮ್ ॥ ೧ ॥

ಕಾಲತ್ರಯಜಿತಕನ್ದರ್ಪಾಣಾಮ್ ।
ಖಣ್ಡಿತಸರ್ವೇನ್ದ್ರಿಯದರ್ಪಾಣಾಮ್ ॥ ೨ ॥

ಪರಮಹಸಂಗುರುಪದಚಿತ್ತಾನಾಮ್ ।
ಬ್ರಹ್ಮಾನನ್ದಾಮೃತಮತ್ತಾನಾಮ್ ॥ ೩ ॥

## ೪. ಇಂಥವರಿಗೆ ಸ್ಥಿರತ್ವವಿಲ್ಲ

ರಾಗ - ಧನಾಸರಿ

ಸ್ಥಿರತಾ ನ ಹಿ ನ ಹಿ ರೇ । ಮಾನಸ ॥ ಧ್ರುವ ॥

ತಾಪತ್ರಯಸಾಗರಮಗ್ನಾನಾಮ್ ।
ದರ್ಪಾಹಙ್ಕಾರವಿಲಗ್ನಾನಾಮ್ ॥ ೧ ॥

ವಿಷಯಪಾಶವೇಷ್ಟಿತಚಿತ್ತಾನಾಮ್ ।
ವಿಪರೀತಜ್ಞಾನವಿಮುಕ್ತಾನಾಮ್ ॥ ೨ ॥

ಪರಮಹಂಸಯೋಗವಿರುದ್ಧಾನಾಮ್ ।
ಬಹುಚಞ್ಚಲತರಸುಖಸಿದ್ಧಾನಾಮ್ ॥ ೩ ॥

## ೫. ಗೋಪಾಲನನ್ನು ಭಜಿಸು

ರಾಗ - ಕಲ್ಯಾಣಿ

ಭಜ ರೇ ಗೋಪಾಲಮ್ । ಮಾನಸ ॥ ಧ್ರುವ ॥

ಭಜ ಗೋಪಾಲಂ ಭಜಿತ ಕುಚೇಲಮ್ ।
ತ್ರಿಜಗನ್ಮೂಲಂ ದಿತಿಸುತಕಾಲಮ್ ॥ ೧ ॥

ಆಗಮಸಾರಂ ಯೋಗವಿಚಾರಮ್ ।
ಭೋಗಶರೀರಂ ಭುವನಾಧಾರಮ್ ॥ ೨ ॥

ಕದನಕಠೋರಂ ಕಲುಷವಿದೂರಮ್ ।
ಮದನಕುಮಾರಂ ಮಧುಸಂಹಾರಮ್ ॥ ೩ ॥

ನತಮನ್ದಾರಂ ನನ್ದಕಿಶೋರಮ್ ।
ಹತಚಾಣೂರಂ ಹಂಸವಿಹಾರಮ್ ॥ ೪ ॥

## ೬. ರಾಮರಸವನ್ನು ಕುಡಿ

ರಾಗ - ಜಂಝೋಟಿ

ಪಿಬರೇ ರಾಮರಸಮ್ । ರಸನೇ ॥ ಧ್ರುವ ॥

ದೂರೀಕೃತಪಾತಕಸಂಸರ್ಗಮ್ ।
ಪೂರಿತ ನಾನಾವಿಧಫಲವರ್ಗಮ್ ॥ ೧ ॥

ಜನನಮರಣಭಯಶೋಕವಿದೂರಮ್ ।
ಸಕಲಶಾಸ್ತ್ರನಿಗಮಾಗಮಸಾರಮ್ ॥ ೨ ॥

ಪರಿಪಾಲಿತಸರಸಿಜಗರ್ಭಾಣ್ಡಮ್ ।
ಪರಮಪವಿತ್ರೀ ಕೃತಪಾಷಣ್ಡಮ್ ॥ ೩ ॥

ಶುಕಶೌನಕಕೌಶಿಕಮುಖಪೀತಮ್ ॥ ೪ ॥

## ೭. ನನ್ನ ಹೃದಯದಲ್ಲಿ ರಾಮನುಆಡುತ್ತಿರುವನು

ರಾಗ - ಅಠಾಣ

ಖೇಲತಿ ಮಮ ಹೃದಯೇ । ರಾಮಃ ॥ ಧ್ರುವ ॥

ಮೋಹಮಹಾರ್ಣವ ತಾರಣಕಾರೀ ।
ರಾಗದ್ವೇಷಮುಖಾಸುರಮಾರೀ ॥ ೧ ॥

ಶಾನ್ತಿವಿದೇಹಸುತಾಸಹಚಾರೀ ।
ದಹರಾಯೋಧ್ಯಾನಗರ ವಿಹಾರೀ ॥ ೨ ॥

ಪರಮಹಂಸಸಾಮ್ರಾಜ್ಯೋದ್ಧಾರೀ ।
ಸತ್ಯಜ್ಞಾನಾನನ್ದ ಶರೀರೀ ॥ ೩ ॥

# ಸದಾಶೀವೇನ್ದ್ರ ಸ್ತುತಿ

ಪರತತ್ತ್ವಲೀನಮನಸೇ
ಪ್ರಣಮದ್ಭವಬನ್ಧಮೋಚನಾಯಾಶು ।
ಪ್ರಕಟಿತಪರತತ್ತ್ವಾಯ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೧ ॥

ಭಾವಾರ್ಥ : ೧. ಪರಮಾತ್ಮತತ್ತ್ವದಲ್ಲಿಯೇ ಮನಸ್ಸನ್ನು ಲಯ ಮಾಡಿಕೊಂಡಿರುವವನಾಗಿಯೂ ನಮಸ್ಕರಿಸಿದವರ ಸಂಸಾರಬಂಧವನ್ನು ಬೇಗನೆ ಬಿಡುಗಡೆಹೊಂದಿಸುವವನಾಗಿಯೂ ಪರತತ್ತ್ವವನ್ನು ಪ್ರಕಟಿಸಿದಾತನಾಗಿಯೂ ಇರುವ ಸದಾಶಿವೇಂದ್ರನಿಗೆ ನಮಸ್ಕಾರಮಾಡುತ್ತೇವೆ.

ಪರಮಶಿವೇನ್ದ್ರಕರಾಮ್ಬುಜ-
ಸಂಭೂತಾಯ ಪ್ರಣಮ್ರವರದಾಯ ।
ಪದಧೂತಪಙ್ಕಜಾಯ
ಪ್ರಣತಿಂ ಕರ್ಮಃ ಸದಾಶಿವೇನ್ದ್ರಾಯ ॥ ೨ ॥

೨. ಪರಮಶಿವೇಂದ್ರರ ಕರಕಮಲಸಂಜಾತನಾಗಿಯೂ ನಮಸ್ಕರಿಸಿದವರ ಇಷ್ಟಾರ್ಥವನ್ನು ನೆರವೇರಿಸುವವನಾಗಿಯೂ ಪಾದಗಳಿಂದ ಕಮಲಗಳನ್ನು ತಿರಸ್ಕರಿಸುತ್ತಿರುವನಾಗಿಯೂ ಇರುವ ಸದಾಶಿವೇಂದ್ರನಿಗೆ ನಮಸ್ಕಾರ ಮಾಡುತ್ತೇವೆ.

ವಿಜನನದೀಕುಞ್ಜಗೃಹೇ
ಮಞ್ಜುಲಪುಲಿನೈಕಮಞ್ಜುತರತಲ್ಪೇ ।
ಶಯನಂ ಕುರ್ವಾಣಾಯ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೩ ॥

೩. ಯಾರೊಬ್ಬರೂ ಇಲ್ಲದ ಹೊಳೆಯ ದಂಡೆಯ ಮೇಲಿರುವ ಗಿಡಗಳ ಪೊದರೆಂಬ ಮನೆಯಲ್ಲಿ ಮನೋಹರವಾದ ಮಳಲೊಟ್ಟಿಲೆಂಬ ವಿಚಿತ್ರವಾದ ಹಾಸಿಗೆಯಲ್ಲಿ ಮಲಗಿರುವ ಸದಾಶಿವೇಂದ್ರನಿಗೆ ನಮಸ್ಕಾರ ಮಾಡುತ್ತೇವೆ.

ಕಾಮಾಹಿದ್ವಿಜಪತಯೇ
ಶಮದಮಮುಖದಿವ್ಯರತ್ನವಾರಿಧಯೇ ।
ಶಮನಾಯ ಮೋಹವಿತತೇಃ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೪ ॥

೪. ಕಾಮವೆಂಬ ಸರ್ಪನಿಗೆ ಗರುಡನಾಗಿರುವಾತನೂ ಶಮದಮ ಮುಂತಾದ ದಿವ್ಯರತ್ನಗಳಿಗೆ ಸಾಗರವಾಗಿರುವಾತನೂ ಆಗಿ ಮೋಹಜಾಲವನ್ನು ನಾಶಗೊಳಿಸುವನಾದ ಸದಾಶಿವೇಂದ್ರನಿಗೆ ನಮಸ್ಕಾರ ಮಾಡುತ್ತೇವೆ

ನಮದಾತ್ಮಬೋಧದಾತ್ರೇ
ರಮತೇ ಪರಮಾತ್ಮತತ್ತ್ವಸೌಧಾಗ್ರೇ ।
ಸಮಬುದ್ಧಯೇಽಶ್ಮ ಹೇಮ್ನೋಃ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೫ ॥

೫. ನಮಸ್ಕರಿಸುವವರಿಗೆ ಆತ್ಮಜ್ಞಾನವನ್ನೀಯುವಾತನೂ, ಪರಮಾತ್ಮ ತತ್ತ್ವವೆಂಬ ಉಪ್ಪರಿಗೆಯ ಮೇಲೆ ವಿಹರಿಸುತ್ತಿರುವವನೂ, ಕಲ್ಲುಬಂಗಾರ ಗಳೆರಡರಲ್ಲಿಯೂ ಸಮಬುದ್ಧಿಯುಳ್ಳಾತನೂ ಆಗಿರುವ ಸದಾಶಿವೇಂದ್ರನಿಗೆ ನಮಸ್ಕಾರ ಮಾಡುತ್ತೇವೆ.

ಗಲಿತಾವಿದ್ಯಾಹಾಲಾ-
ಹಲಹತಪುರ್ಯಷ್ಟಕಾಯ ಬೋಧೇನ ।
ಮೋಹಾನ್ಧಕಾರರವಯೇ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೬ ॥

೬. ಅವಿದ್ಯೆಯೆಂಬ ಹಾಲಾಹಲದಿಂದ ಸಂಕಟಪಡುತ್ತಿರುವ (ಜ್ಞಾನೇಂದ್ರಿಯಪಂಚಕ, ಕರ್ಮೇಂದ್ರಿಯಪಂಚಕ, ಪ್ರಾಣಾದಿಪಂಚಕ, ಭೂತಪಂಚಕ, ಅಂತಃಕರಣಚತುಷ್ಟಯ, ಅವಿದ್ಯೆ , ಕಾಮ, ಕರ್ಮ - ಎಂಬ ಎಂಟು ಭಾಗಗಳಿಂದಾಗಿರುವ) ಪುರ್ಯಷ್ಟಕವನ್ನು ಜ್ಞಾನದಿಂದ ತೊಲಗಿಸಿಕೊಂಡಿರುವಾತನೂ ಮೋಹವೆಂಬ ಕಗ್ಗತ್ತಲೆಗೆ ಸೂರ್ಯನೂ ಆಗಿರುವ ಸದಾಶಿವೇಂದ್ರನಿಗೆ ನಮಸ್ಕಾರ ಮಾಡುತ್ತೇವೆ.

ಶಮಮುಖಷಟ್ಕಮುಮುಕ್ಷಾ
ವಿವೇಕವೈರಾಗ್ಯದಾನನಿರತಾಯ ।
ತರಸಾ ನತಜನತತಯೇ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೭ ॥

೭. ನಮಸ್ಕಾರಮಾಡಿದ ಜನಸಮೂಹಕ್ಕೆಲ್ಲ ಶಮವೇ ಮುಂತಾದ (ಶಮದಮಉಪರತಿತಿಕ್ಷಾಶ್ರದ್ಧಾಸಮಾಧಾನಗಳೆಂಬ) ಆರು ಮುಮುಕ್ಷುತ್ವವನ್ನೂ[1] ನಿತ್ಯಾನಿತ್ಯವಿವೇಕವನ್ನೂ ಇಹಲೋಕಪರಲೋಕದಲ್ಲಾಗುವ ಫಲಭೋಗಗಳಲ್ಲಿ ವಿರಾಗವನ್ನೂ ಅನುಗ್ರಹಿಸುವದರಲ್ಲಿ ನಿರತನಾದ ಸದಾಶಿವೇಂದ್ರನಿಗೆ ನಮಸ್ಕಾರ ಮಾಡುತ್ತೇವೆ.

ಸಿದ್ಧಾನ್ತ ಕಲ್ಪವಲ್ಲೀ -
ಮುಖಕೃತಿಕರ್ತ್ರೇ ಕಪಾಲಿಭಕ್ತಿಕೃತೇ ।
ಕರತಲಮುಕ್ತಿಫಲಾಯ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೮ ॥

೮. "ಸಿದ್ಧಾಂತಕಲ್ಪವಲ್ಲಿ"ಯೇ ಮುಂತಾದ ಗ್ರಂಥಗಳನ್ನು ರಚಿಸಿದಾತನೂ ಕಪಾಲಮಾಲಾಧರನಾದ ಶಿವನಲ್ಲಿ ಭಕ್ತಿಯನ್ನು ಮಾಡುವವನೂ, ಅಂಗೈಯಲ್ಲಿ ಮುಕ್ತಿಫಲವನ್ನಿಟ್ಟುಕೊಂಡಿರುವವನೂ ಆದ ಸದಾಶಿವೇಂದ್ರನಿಗೆ ನಮಸ್ಕಾರಮಾಡುವೆವು.

1. ಇವೇ ಬ್ರಹ್ಮಜಿಜ್ಞಾಸೆಗೆ ಬೇಕಾದ ನಾಲ್ಕು ಸಾಧನಗಳು. ಸೂ.ಭಾ. ೧-೧-೧ ನೋಡಿ.

ತೃಣಪಙ್ಕಲಿಪ್ತವಪುಷೇ
ತೃಣತೋऽಪ್ಯಧರಂ ಜಗದ್ವಿಲೋಕಯತೇ ।
ವನಮಧ್ಯವಿಹರಣಾಯ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೯ ॥

೯. ಮೈಮೇಲೆ ಹುಲ್ಲುಕಡ್ಡಿ, ಕೆಸರು - ಇವುಗಳು ಹತ್ತಿಕೊಂಡಿರುವವನಾಗಿಯೂ ಜಗತ್ತನ್ನು ತೃಣಕ್ಕಿಂತಲೂ ಕಡೆಯಾಗಿ ಕಾಣುತ್ತಾ ಕಾಡಿನ ನಡುವೆ ಸಂಚರಿಸುತ್ತಿರುವವನಾಗಿಯೂ ಇರುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ನಿಗೃಹೀತಹೃದಯಹರಯೇ
ಪ್ರಗೃಹೀತಾತ್ಮಸ್ವರೂಪರತ್ನಾಯ ।
ಪ್ರಣತಾಬ್ಧಿಪೂರ್ಣಶಶಿನೇ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೧೦ ॥

೧೦. ಮನಸ್ಸೆಂಬ ಕಪಿಯನ್ನು ಹಿಡಿದುಕಟ್ಟಿರುವವನೂ, ಆತ್ಮಸ್ವರೂಪವೆಂಬ ರತ್ನವನ್ನು ಸ್ವೀಕರಿಸಿದವನೂ, ನಮಸ್ಕರಿಸಿದ ಜನಸಾಗರಕ್ಕೆ ಪೂರ್ಣಚಂದ್ರನೂ ಆದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ಅಜ್ಞಾನತಿಮಿರರವಯೇ
ಪ್ರಜ್ಞಾನಾಮ್ಭೋಧಿಪೂರ್ಣಚಂದ್ರಾಯ ।
ಪ್ರಣತಾಘವಿಪಿನಶುಚಯೇ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೧೧ ॥

೧೧. ಅಜ್ಞಾನವೆಂಬ ಕತ್ತಲೆಗೆ ಸೂರ್ಯನೂ, ಪ್ರಜ್ಞಾನವೆಂಬ ಸಮುದ್ರಕ್ಕೆ ಪೂರ್ಣಚಂದ್ರನೂ, ನಮಸ್ಕರಿಸಿದವರ ಪಾಪವೆಂಬ ಕಾಡಿಗೆ ದಾವಾಗ್ನಿಯೂ ಆಗಿರುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ಮತಿಮಲಮೋಚನದಕ್ಷ -
ಪ್ರತ್ಯಗ್ಬ್ರಹ್ಮೈಕ್ಯದಾನನಿರತಾಯ ।
ಸ್ಮೃತಿಮಾತ್ರತುಷ್ಟಮನಸೇ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೧೨ ॥

೧೨. ಚಿತ್ತದಲ್ಲಿರುವ ಕಲ್ಮಷವನ್ನು ತೊಳೆದುಹಾಕುವದರಲ್ಲಿ ಸಮರ್ಥವಾದ ಬ್ರಹ್ಮಾತ್ಮೈಕ್ಯಜ್ಞಾನವನ್ನು ಕೊಡುವದರಲ್ಲಿಯೇ ನಿರತನಾಗಿರುವಾತನೂ ನೆನಸಿದ ಮಾತ್ರದಿಂದ ಸಂತೋಷಪಡುವ ಮನಸ್ಸುಳ್ಳಾತನೂ ಆಗಿರುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ನಿಜಗುರುಪರಮಶಿವೇನ್ದ್ರ -
ಶ್ಲಾಘಿತವಿಜ್ಞಾನಕಾಷ್ಠಾಯ ।
ನಿಜತತ್ತ್ವನಿಶ್ಚಲಹೃದೇ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೧೩ ॥

೧೩. ಗುರುಗಳಾದ ಪರಮಶಿವೇಂದ್ರರು ಹೊಗಳಿದಂಥ ವಿಜ್ಞಾನದ ತುಟ್ಟತುದಿಯನ್ನು ಮುಟ್ಟಿದವನೂ[1] ಆತ್ಮತತ್ತ್ವದಲ್ಲಿ ಅಲುಗಾಡದೆ ನಿಂತಿರುವ ಚಿತ್ತವುಳ್ಳವನೂ ಆಗಿರುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ಪ್ರವಿಲಾಪ್ಯ ಜಗದಶೇಷಂ
ಪರಿಶಿಷ್ಟಾಖಣ್ಡವಸ್ತುನಿರತಾಯ ।
ಆಸ್ಯಪ್ರಾಪ್ತಾನ್ನಭುಜೇ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೧೪ ॥

---

1. ನಿಮ್ಮ ಶಿಷ್ಯನು ಹುಚ್ಚನಂತೆ ಅಲೆದಾಡುತ್ತಿರುವನೆಂದು ಯಾರೋ ಹೇಳಲು ಪರಮಶಿವೇಂದ್ರರು 'ನನಗೆ ಅಂಥ ಹುಚ್ಚು ಬರಲಿಲ್ಲವಲ್ಲ !' - ಎಂದು ಕೊಂಡಾಡಿದರಂತೆ.

೧೪. ಜಗತ್ತೆಲ್ಲವನ್ನೂ ಪ್ರವಿಲಯಮಾಡಿಕೊಂಡು, ಕೊನೆಗುಳಿಯುವ ಅಖಂಡವಸ್ತುವಾದ ಆತ್ಮನಲ್ಲಿಯೇ ಆಸಕ್ತಿಯಿಂದಿರುವಾತನೂ, ಬಾಯಿಗೆ ಬಂದೊದಗಿದ ಅನ್ನವನ್ನು ಭುಂಜಿಸುವಾತನೂ ಆದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ಉಪಧಾನೀಕೃತಬಾಹುಃ
ಪರಿರಬ್ಧವಿರಕ್ತಿರಾಮೋ ಯಃ ।
ವಸನೀಕೃತಖಾಯಾಸ್ಮೈ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೧೫ ॥

೧೫. ತೋಳನ್ನು ತಲೆದಿಂಬುಮಾಡಿಕೊಂಡು ವಿರಕ್ತಿಯೆಂಬ ಸ್ತ್ರೀಯನ್ನು ತಬ್ಬಿಕೊಂಡು ಆಕಾಶವೆಂಬ ವಸ್ತ್ರವನ್ನು ಹೊದೆದುಕೊಂಡಿರುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ಸಕಲಾಗಮಾನ್ತಸಾರ -
ಪ್ರಕಟನದಕ್ಷಾಯ ಸಮ್ರಪಕ್ಷಾಯ ।
ಸಚ್ಚಿತ್ಸುಖರೂಪಾಯ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೧೬ ॥

೧೬. ವೇದಾಂತಸಾರವನ್ನೆಲ್ಲ ಹೊರಗೆಡಹುವದರಲ್ಲಿ ಸಮರ್ಥನೂ, ನಮಿಸಿದವರ ಪಕ್ಷವನ್ನು ವಹಿಸುವಾತನೂ ಸಚ್ಚಿದಾನಂದರೂಪನೂ ಆದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ದ್ರಾಕ್ಷಾಶಿಕ್ಷಣಚತುರ-
ವ್ಯಾಹಾರಾಯ ಪ್ರಭೂತಕರುಣಾಯ ।
ವೀಕ್ಷಾಪಾವಿತಜಗತೇ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೧೭ ॥

೧೭. ದ್ರಾಕ್ಷಿಗೂ ಮಾಧುರ್ಯವನ್ನು ಕಲಿಸಿಕೊಡಬಲ್ಲ ವಾಕ್ಕಿನವನೂ ಪರಮದಯಾಳುವೂ ಕಟಾಕ್ಷದಿಂದ ಜಗತ್ತನ್ನೇ ಪಾವನಗೊಳಿಸುವಾತನೂ ಆದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ಯೋಽನುತ್ಪನ್ನವಿಕಾರೋ
ಬಾಹೌ ಮ್ಲೇಚ್ಛೇನ ಛಿನ್ನಪತಿತೇಽಪಿ ।
ಅವಿದಿತಮಮತಾಯಾಸ್ಮೈ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೧೮ ॥

೧೮. ತೋಳನ್ನು ಮ್ಲೇಚ್ಛನು ಕಡಿದು ಕೆಡಹಿದ ಮೇಲೂ ಯಾವಾತನು ಯಾವುದೊಂದು ಮನೋವಿಕಾರವೂ ಉಂಟಾಗದೆ ಇದ್ದನೋ[1], ತನ್ನದೆಂಬುದನ್ನೇ ಅರಿಯದ ಆ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ನ್ಯಪತನ್ ಸುಮಾನಿ ಮೂರ್ಧನಿ
ಯೇನೋಚ್ಚರಿತೇಷು ನಾಮಸೂಗ್ರಸ್ಯ ।
ತಸ್ಮೈ ಸಿದ್ಧವರಾಯ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೧೯ ॥

೧೯. ಯಾವಾತನು ಶಿವನ ನಾಮವನ್ನು ಉಚ್ಚರಿಸಿದರೆ ಆಕಾಶದಿಂದ ತಲೆಯ ಮೇಲೆ ಕುಸುಮಗಳು ಬೀಳುತ್ತಿದ್ದವೋ ಆ ಸಿದ್ಧವರನಾದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ಯಃ ಪಾಪಿನೋಽಪಿ ಲೋಕಾಂ
ಸ್ತರಸಾ ಪ್ರಕರೋತಿ ಪುಣ್ಯನಿಷ್ಠಾಗ್ರ್ಯಾನ್ ।
ಕರುಣಾಮ್ಬುರಾಶಯೇಽಸ್ಮೈ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೨೦ ॥

---

1. ಪೀಠಿಕೆಯಲ್ಲಿರುವ ಚರಿತ್ರೆಯನ್ನು ನೋಡಿ.

೨೦. ಯಾವಾತನು ಪಾಪಿಜನರನ್ನು ಕೂಡ ಪುಣ್ಯವಂತರಲ್ಲಿ ಶ್ರೇಷ್ಠರಾಗಿ ಮಾಡುತ್ತಿದ್ದನೋ, ಆ ಕರುಣಾಸಮುದ್ರನಾದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

**ಸಿದ್ಧೇಶ್ವರಾಯ ಬುದ್ಧೇಃ**
**ಶುದ್ಧಿ ಪ್ರದಪಾದಪದ್ಮನಮನಾಯ ।**
**ಬದ್ಧೌಘಮೋಚಕಾಯ**
**ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೨೧॥**

೨೧. ಸಿದ್ಧರುಗಳೊಡೆಯನೂ ಪಾದಕಮಲಗಳಿಗೆರಗಿದ ಮಾತ್ರದಿಂದ ಚಿತ್ತಶುದ್ಧಿಯನ್ನು ಕೊಡುವಾತನೂ ಸಂಸಾರಬದ್ಧರಾಗಿರುವವರನೇಕರನ್ನು ಬಿಡುಗಡೆಹೊಂದಿಸುವವನೂ ಆದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

**ಹೃದ್ಯಾಯ ಲೋಕವಿತತೇಃ**
**ಪದ್ಯಾವಲಿದಾಯ ಜನ್ಮಮೂಕೇಭ್ಯಃ ।**
**ಪ್ರಣತೇಭ್ಯಃ ಪದಯುಗಲೇ**
**ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೨೨ ॥**

೨೨. ಜನಸಮೂಹಕ್ಕೆಲ್ಲ ಮನೋರಂಜಕನಾಗಿಯೂ ಪದಯುಗಕ್ಕೆ ನಮಿಸಿದವರು ಹುಟ್ಟು ಮೂಕರಾದರೂ ಪದ್ಯಾವಲಿಯನ್ನು ರಚಿಸುವ ಕೌಶಲವನ್ನು ಕೊಡುವಾತನಾಗಿಯೂ ಇರುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

**ಜಿಹ್ವೋಪಸ್ಥರತಾನ -**
**ಪ್ಯಾಹೋಚ್ಚಾರೇಣ ಜಾತು ನೈಜಸ್ಯ ।**
**ಕುರ್ವಾಣಾಯ ವಿರಕ್ತಾನ್**
**ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೨೩. ॥**

೨೩. ನಾಲಗೆ, ಜನನೇಂದ್ರಿಯ - ಇವುಗಳ ಸುಖದಲ್ಲಿಯೇ ಮಗ್ನರಾಗಿರುವವರನ್ನು ಕೂಡ ಒಂದು ಸಲ ತನ್ನೊಡನೆ ಮಾತನಾಡಿದ ಮಾತ್ರದಿಂದ ವಿರಕ್ತರನ್ನಾಗಿ ಮಾಡುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

**ಕಮನೀಯಕವನಕರ್ತ್ರೇ**
**ಶಮನೀಯಭಯಾಪಹಾರಚುತುರಾಯ ।**
**ತಪನೀಯಸದೃಶವಪುಷೇ**
**ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೨೪ ॥**

೨೪. ಎಲ್ಲರೂ ಬಯಸುವಂಥ ಮನೋಹರವಾದ ಕವಿತೆಯನ್ನು ಮಾಡುವಾತನಾಗಿಯೂ ಯಮನ ಭಯವನ್ನು ಹೋಗಲಾಡಿಸುವದರಲ್ಲಿ ನಿಪುಣನಾಗಿಯೂ ಚಿನ್ನದಂತೆ ಮೈಬಣ್ಣವುಳ್ಳಾತನಾಗಿಯೂ ಇರುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

**ತಾರಕವಿದ್ಯಾದಾತ್ರೇ**
**ತಾರಕಪತಿಗರ್ವವಾರಕಾಸ್ಯಾಯ ।**
**ತಾರಜಪಪ್ರವಣಾಯ**
**ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೨೫ ॥**

೨೫. ಶಿಷ್ಯರಿಗೆ ತಾರಕವಿದ್ಯೆಯನ್ನು ಉಪದೇಶಿಸುವಾತನೂ ಚಂದ್ರನ ಗರ್ವವನ್ನು ಪರಿಹರಿಸುವ ಸುಂದರವಾದ ಮುಖವುಳ್ಳವನೂ ಪ್ರಣವ ಜಪವನ್ನು ಮಾಡುವದರಲ್ಲಿಯೇ ನಿರತನೂ ಆಗಿರುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

**ಮೂಕೋಽಪಿ ಯತ್ಕೃಪಾ ಚೇತ್**
**ಲೋಕೋತ್ತರಕೀರ್ತಿರಾಶು ಜಾಯೇತ ।**
**ಅದ್ಭುತಚರಿತಾಯಾಸ್ಮೈ**
**ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೨೬ ॥**

೨೬. ಯಾವನ ಕೃಪೆಯುಂಟಾದರೆ ಮೂಕನಿಗೂ ಲೋಕೋತ್ತರವಾದ ಕೀರ್ತಿಯು ಬೇಗನೆ ಉಂಟಾದೀತೋ ಅಂಥ ಅದ್ಭುತಚರಿತನಾದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ದುರ್ಜನದೂರಾಯತರಾಂ
ಸಜ್ಜನಸುಲಭಾಯ ಹಸ್ತಪಾತ್ರಾಯ ।
ತರುತಲನಿಕೇತನಾಯ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೨೭ ॥

೨೭. ದುರ್ಜನರಿಗೆ ಅತಿದೂರದಲ್ಲಿರುವವನೂ ಸಜ್ಜನರಿಗೆ ಸುಲಭನಾಗಿ ದೊರಕುವವನೂ ಆಗಿ ಕರತಲವನ್ನೇ ಭಿಕ್ಷಾಪಾತ್ರೆಯನ್ನಾಗಿ ಮಾಡಿಕೊಂಡು ಮರದಡಿಯಲ್ಲಿ ಮನೆಮಾಡಿಕೊಂಡಿರುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ಭವಸಿನ್ಧುತಾರಯಿತ್ರೇ-
ಭವಭಕ್ತಾಯ ಪ್ರಣಮ್ರವಶ್ಯಾಯ ।
ಭವಬನ್ಧವಿರಹಿತಾಯ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೨೮ ॥

೨೮. ಸಂಸಾರಸಮುದ್ರವನ್ನು ದಾಟಿಸುವವನೂ ಈಶ್ವರನ ಭಕ್ತನೂ ನಮಸ್ಕರಿಸಿದವರ ವಶದಲ್ಲಿರುವವನೂ ಸಂಸಾರಬಂಧವಿಲ್ಲದವನೂ ಆದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ತ್ರಿವಿಧಸ್ಯಾಪಿ ತ್ಯಾಗಂ
ವಪುಷಃ ಕರ್ತುಂ ಸ್ಥಲತ್ರಯೇ ಯ ಇವ ।
ಅಕರೋತ್ಸಮಾಧಿಮಸ್ಮೈ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೨೯ ॥

೨೯. (ಸ್ಥೂಲಸೂಕ್ಷ್ಮಕಾರಣವೆಂಬ) ಮೂರು ಬಗೆಯ ದೇಹವನ್ನೂ ಬಿಡುವದಕ್ಕೋ ಎಂಬಂತೆ ಯಾವಾತನು ಮೂರು ಕಡೆಯಲ್ಲಿ ಸಮಾಧಿಯನ್ನು ಹೊಂದಿದನೋ ಆ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

**ಕಾಮಿನಮಪಿ ಜಿತಹೃದಯಂ**
**ಕ್ರೂರಂ ಶಾನ್ತಂ ಜಡಂ ಸುಧಿಯಮ್ ।**
**ಕುರುತೇ ಯತ್ಕರುಣಾಸ್ಮೈ**
**ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೩೦ ॥**

೩೦. ಯಾವನ ಕರುಣೆಯು ಕಾಮುಕನನ್ನು ಕೂಡ ಜಿತೇಂದ್ರಿಯನನ್ನಾಗಿಯೂ ಕ್ರೂರನನ್ನು ಶಾಂತನನ್ನಾಗಿಯೂ ಮೂಢನನ್ನು ವಿದ್ವಾಂಸನನ್ನಾಗಿಯೂ ಮಾರ್ಪಡಿಸಬಲ್ಲದೋ ಆ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

**ವೇದಸ್ಮೃತಿಸ್ಥವಿದ್ವ-**
**ಲ್ಲಕ್ಷಣಲಕ್ಷ್ಯೇಷು ಸಂದಿಹಾನಾನಾಮ್ ।**
**ನಿಶ್ಚಯಕೃತೇ ವಿಹರ್ತ್ರೇ**
**ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೩೧ ॥**

೩೧. ಶ್ರುತಿಸ್ಮೃತಿಗಳಲ್ಲಿರುವ ಜ್ಞಾನಿಯ ಲಕ್ಷಣಗಳು ಯಾವ ಲಕ್ಷ್ಯಗಳಲ್ಲಿ ಕಂಡುಬರುವವ್ರೋ ಎಂದು ಸಂದೇಹಪಡುತ್ತಿರುವವರಿಗೆ ನಿಶ್ಚಯವನ್ನುಂಟುಮಾಡಿಕೊಡುವುದಕ್ಕಾಗಿ ಸಂಚರಿಸುತ್ತಿರುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

**ಬಾಲಾರುಣನಿಭವಪುಷೇ**
**ಲೀಲಾನಿರ್ಧೂತಕಾಮಗರ್ವಾಯ ।**
**ಲೋಲಾಯ ಚಿತಿ ಪರಸ್ಯಾಂ**
**ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೩೨ ॥**

೩೨. ಬೆಳಗಿನಜಾವದ ಅರುಣೋದಯದಂತೆ ಕೆಂಪಗಿರುವ ಶರೀರವುಳ್ಳವನೂ ಲೀಲಾಮಾತ್ರದಿಂದ ಕಾಮನ ಗರ್ವವನ್ನೆಲ್ಲ ಅಡಗಿಸಿದವನೂ ಪರಮಚೈತನ್ಯಸ್ವರೂಪದಲ್ಲಿಯೇ ಲೋಲನಾಗಿರುವವನೂ ಆದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ಶರಣೀಕೃತಾಯ ಸುಗುಣೈ-
ಶ್ಚರಣೀಕೃತರಕ್ತಪಙ್ಕಜಾತಾಯ ।
ಧರಣೀಸದೃಕ್ ಕ್ಷಮಾಯ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೩೩ ॥

೩೩. ಸದ್ಗುಣಗಳಿಗೆಲ್ಲ ಆಶ್ರಯನಾಗಿಯೂ ಕೆಂದಾವರೆಯಡಿಯುಳ್ಳಾತನಾಗಿಯೂ ಭೂಮಿಯಂತೆ ಕ್ಷಮಾಗುಣಸಂಪನ್ನನಾಗಿಯೂ ಇರುವ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ಪ್ರಣತಾಯ ಯತಿವರೇಣ್ಯೈ-
ರ್ಗಣನಾಥೇನಾಪ್ಯಸಾಧ್ಯವಿಘ್ನಹೃತೇ ।
ಗುಣದಾಸೀಕೃತಜಗತೇ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೩೪ ॥

೩೪. ಯತಿಶ್ರೇಷ್ಠರುಗಳಿಂದ ನಮಸ್ಕರಿಸಲ್ಪಡುವಾತನೂ, ಗಣಪತಿಯಿಂದ ಕೂಡ ಪರಿಹರಿಸಲಶಕ್ಯವಾದ ತೊಡರುಗಳನ್ನು ಹೋಗಲಾಡಿಸುವಾತನೂ, ತನ್ನ ಸುಗಣಗಳಿಂದ ಜಗತ್ತನ್ನೇ ಅಡಿಯಾಳಾಗಿ ಮಾಡಿಕೊಂಡಾತನೂ ಆದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

ಸಹಮಾನಾಯ ಸಹಸ್ರಾ -
ಣ್ಯಪ್ಯಪರಾಧಾನ್ ಪ್ರಣಮ್ರಜನರಚಿತಾನ್ ।
ಸಹಸೈವ ಮೋಕ್ಷದಾತ್ರೇ
ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೩೫ ॥

೩೫. ತನಗೆ ನಮಸ್ಕಾರಮಾಡಿದವರು ಮಾಡುವ ಸಾವಿರಾರು ತಪ್ಪುಗಳನ್ನೂ ಕ್ಷಮಿಸಿ ಕೂಡಲೆ ಮೋಕ್ಷವನ್ನು ಕೊಡಬಲ್ಲವನಾದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

**ಧೃತದೇಹಾಯ ನತಾವಲಿ-**
**ತೂರ್ಣಪ್ರಜ್ಞಾಪ್ರದಾನವಾಞ್ಛಾತಃ ।**
**ಶ್ರೀದಕ್ಷಿಣವಕ್ತ್ರಾಯ**
**ಪ್ರಣತಿಂ ಕುರ್ಮಃ ಸದಾಶಿವೇನ್ದ್ರಾಯ ॥ ೩೬ ॥**

೩೬. ನಮಸ್ಕರಿಸಿದವರ ಸಮೂಹಕ್ಕೆಲ್ಲ ಕೂಡಲೆ ಜ್ಞಾನದಾನವನ್ನು ಮಾಡಬೇಕೆಂಬ ಇಚ್ಛೆಯಿಂದ ಅವತರಿಸಿದ ಶ್ರೀದಕ್ಷಿಣಾಮೂರ್ತಿಯಾದ ಸದಾಶಿವೇಂದ್ರನಿಗೆ ನಮಸ್ಕಾರವನ್ನು ಮಾಡುತ್ತೇವೆ.

**ತಾಪತ್ರಯಾರ್ತಹೃದಯ-**
**ಸ್ತಾಪತ್ರಯಹಾರದಕ್ಷನಮನಮಹಮ್ ।**
**ಗುರುವರಬೋಧಿತಮಹಿಮಃ**
**ಶರಣಂ ಯಾಸ್ಯೇ ತವಾಙ್ಘ್ರಿಕಮಲಯುಗಮ್ ॥ ೩೭ ॥**

೩೭. (ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವೆಂಬ) ತಾಪತ್ರಯದಿಂದ ಸಂಕಟಪಡುತ್ತಿರುವ ಹೃದಯವುಳ್ಳ ನಾನು, ನಿನಗೆ ಮಾಡಿದ ನಮಸ್ಕಾರವು ತಾಪತ್ರಯವನ್ನೂ ಪರಿಹರಿಸಬಲ್ಲದ್ದಾದ್ದರಿಂದ ನಮ್ಮ ಗುರುಗಳಿಂದ ನಿನ್ನ ಮಹಿಮೆಯನ್ನು ಅರಿತುಕೊಂಡವನಾಗಿ ನಿನ್ನ ಚರಣ ಕಮಲಯುಗಲವನ್ನು ಶರಣು ಹೊಂದಿರುವೆನು.

ಸದಾತ್ಮನಿ ವಿಲೀನಹೃತ್ಸಕಲವೇದಶಾಸ್ತ್ರಾರ್ಥವಿತ್
ಸರಿತ್ತಟವಿಹಾರಕೃತ್ ಸಕಲಲೋಕಹೃತ್ತಾಪಹೃತ್ ।
ಸದಾಶಿವಪದಾಮ್ಬುಜಪ್ರಣತಲೋಕಲಭ್ಯಪ್ರಭೋ
ಸದಾಶಿವಯತೀಟ್ ಸದಾ ಮಯಿ ಕೃಪಾಮಪಾರಾಂ ಕುರು ॥

೩೮. ಯಾವಾಗಲೂ ಪರಮಾತ್ಮನಲ್ಲಿಯೇ ಲಯವಾಗಿರುವ ಹೃದಯವುಳ್ಳಾತನೆ, ಸಕಲ ವೇದಶಾಸ್ತ್ರಗಳ ಅರ್ಥವನ್ನೂ ಬಲ್ಲಾತನೆ, ನದಿಯ ದಡದಲ್ಲಿ ಸಂಚರಿಸುತ್ತಿರುವಾತನೆ, ಸಕಲ ಜನರ ಹೃದಯದ ಸಂತಾಪವನ್ನೂ ಪರಿಹರಿಸುವಾತನೆ, ಸದಾಶಿವನ ಪದಕಮಲಕ್ಕೆ ಬಾಗಿದ ಜನರಿಗೆ ದೊರಕುವ ಪ್ರಭುವೆ, ಸದಾಶಿವಯತೀಶ್ವರನೆ, ಯಾವಾಗಲೂ ನನ್ನಲ್ಲಿ ಮಿಗಿಲಿಲ್ಲದ ದಯೆಯನ್ನು ಮಾಡುವವನಾಗು.

ಪುರಾ ಯವನಕರ್ತನಸ್ರವದಮನ್ದರಕ್ತೋಽಪಿ ಯಃ
ಪುನಃ ಪದಸರೋರುಹಪ್ರಣತಮೇನಮೇನೋನಿಧಿಮ್ ।
ಕೃಪಾಪರವಶಃ ಪದಂ ಪತನವರ್ಜಿತಂ ಪ್ರಾಪ ಯಃ
ಸದಾಶಿವಯತೀಟ್ ಸ ಮಯ್ಯನವಧಿಂ ಕೃಪಾಂ ಸಿಞ್ಚತು ॥

೩೯. ಪೂರ್ವದಲ್ಲಿ ಯವನನೋರ್ವನು ತೋಳನ್ನು ಕತ್ತರಿಸಲು ರಕ್ತವು ಹೇರಳವಾಗಿ ಸುರಿಯುತ್ತಿದ್ದರೂ ಮತ್ತೆ ತನ್ನ ಚರಣಕಮಲಕ್ಕೆರಗಿದ ಆ ಪಾಪಿಷ್ಠನಲ್ಲಿ ಕೃಪಾಪರವಶನಾಗಿ ಅವನಿಗೆ ಪುನರಾವೃತ್ತಿಯಿಲ್ಲದ ಮುಕ್ತಿಯನ್ನೇ ಒದಗಿಸಿಕೊಟ್ಟ ಸದಾಶಿವಯತೀಶ್ವರನು ನನ್ನ ಮೇಲೆ ಮಿಗಿಲಿಲ್ಲದ ಕೃಪೆಯ ಅಮೃತವವನ್ನು ಚೆಲ್ಲಲಿ !

ಹೃಷೀಕಹೃತಚೇತಸಿ ಪ್ರಹೃತದೇಹಕೇ ರೋಗಕೈ-
ರನೇಕವೃಜಿನಾಲಯೇ ಶಮದಮಾದಿಗನ್ಧೋಜ್ಝಿತೇ ।
ತವಾಙ್ಘ್ರಿಪತಿತೇ ಯತೌ ಯತಿಪತೇ ಮಹಾಯೋಗಿರಾಟ್
ಸದಾಶಿವ ಕೃಪಾಂ ಮಯಿ ಪ್ರಕುರು ಹೇತುಶೂನ್ಯಾಂ ದ್ರುತಮ್ ॥

೪೦. ಇಂದ್ರಿಯಗಳಿಂದಪಹೃತವಾಗಿರುವ ಚಿತ್ತವುಳ್ಳವನೂ ಕುತ್ಸಿತರೋಗಗಳ ಹೊಡೆತಕ್ಕೆ ಸಿಕ್ಕಿ ನರಳುತ್ತಿರುವ ದೇಹವುಳ್ಳವನೂ ಅನೇಕ ಪಾಪಗಳಿಗೆ ವಾಸಸ್ಥಾನನೂ ಶಮದಮಾದಿಗಳ ವಾಸನೆಯೂ ಇಲ್ಲದವನೂ ಆದ, ನಿನ್ನ ಪಾದಕ್ಕೆರಗಿರುವ ಯತಿಯಾದ ನನ್ನಲ್ಲಿ, ಎಲೈ, ಯತಿಗಳೊಡೆಯನೆ, ಮಹಾಯೋಗಿರಾಜನೇ ಸದಾಶಿವನೆ, ನಿರ್ಹೇತುಕವಾದ ದಯೆಯನ್ನು ಬೇಗ ತೋರಿಸುವನಾಗು.

ನ ಚಾಹಮತಿಚಾತುರೀರಚಿತಶಬ್ದ ಸಙ್ಘೈಃ ಸ್ತುತಿಂ
ವಿಧಾತುಮಪಿ ಚ ಕ್ಷಮೋ ನ ಚ ಜಪಾದಿಕೇಽಪ್ಯಸ್ತಿ ಮೇ ।
ಬಲಂ ಬಲವತಾಂ ವರ ಪ್ರಕುರು ಹೇತುಶೂನ್ಯಾಂ ವಿಭೋ
ಸದಾಶಿವ ಕೃಪಾಂ ಮಯಿ ಪ್ರವರ ಯೋಗಿನಾಂ ಸತ್ವರಮ್।

೪೧. ನಾನು ಬಲು ಜಾಣತನದಿಂದ ರಚಿಸಿದ ವಾಕ್ಯಗಳಿಂದ ನಿನ್ನನ್ನು ಸ್ತುತಿಮಾಡುವದಕ್ಕೆ ಶಕ್ತನಲ್ಲ ; ಎಲೈ ಬಲವಂತರಲ್ಲಿ ಶ್ರೇಷ್ಠನಾದವನೆ, ನನಗೆ ಜಪಾದಿಗಳಲ್ಲಿಯೂ ಬಲವಿಲ್ಲ. ಎಲೈ ವಿಭುವೆ, ಯೋಗಿಶ್ರೇಷ್ಠನೆ, ಸದಾಶಿವನೆ, ಬೇಗ ನನ್ನಲ್ಲಿ ನಿರ್ಹೇತುಕವಾದ ಕೃಪೆಯನ್ನು ಮಾಡುವನಾಗು.

ಶಬ್ದಾರ್ಥವಿಜ್ಞಾನಯುತಾ ಹಿ ಲೋಕೇ
ವಸನ್ತಿ ಲೋಕಾ ಬಹವಃ ಪ್ರಕಾಮಮ್ ।
ನಿಷ್ಠಾಯುತಾ ನ ಶ್ರುತದೃಷ್ಟಪೂರ್ವಾ
ವಿನಾ ಭವನ್ತಂ ಯತಿರಾಜ ನೂನಮ್ ॥ ೪೨ ॥

೪೨. ಎಲೈ ಯತಿರಾಜನೆ, ಲೋಕದಲ್ಲಿ ಶಬ್ದಗಳ ಅರ್ಥವನ್ನು ತಿಳಿದುಕೊಂಡಿರುವವರು ಬೇಕಾದಷ್ಟು ಜನರಿರುವರು ; ಆದರೆ ನಿಷ್ಠೆಯಿಂದೊಡಗೂಡಿದವನು ನೀನೊಬ್ಬನಲ್ಲದೆ ಮತ್ತೆ ಯಾರನ್ನೂ ಕಂಡದ್ದೂ ಇಲ್ಲ , ಕೇಳಿದ್ದೂ ಇಲ್ಲ.

ಸ್ತೋಕಾರ್ಚನಪ್ರೀತಹೃದಮ್ಬುಜಾಯ
ಪಾಕಾಬ್ಜಚೂಡಾಪರರೂಪಧರ್ತ್ರೇ ।
ಶೋಕಾಪಹರ್ತ್ರೇ ತರಸಾ ನತಾನಾಂ
ಪಾಕಾಯ ಪುಣ್ಯಸ್ಯ ನಮೋ ಯತೀಶೇ ॥ ೪೩ ॥

೪೩. ಸ್ವಲ್ಪಮಟ್ಟಿಗೆ ಪೂಜಿಸುವದರಿಂದಲೇ ಸಂತೋಷಗೊಳ್ಳುವ ಹೃದಯಕಮಲವುಳ್ಳಾತನೂ ಬಾಲಚಂದ್ರಶೇಖರನ ಅಪರಾವತಾರನೂ ನಮಸ್ಕರಿಸಿದವರ ಶೋಕವನ್ನು ಬೇಗ ಪರಿಹರಿಸುವನೂ, ಪುಣ್ಯದ ಪರಿಪಾಕರೂಪನೂ ಆಗಿರುವ ಯತೀಶ್ವರನಿಗೆ ನಮಸ್ಕಾರ.

ನಾಹಂ ಹೃಷೀಕಾಣಿ ವಿಜೇತುಮೀಶೋ
ನಾಹಂ ಸಪರ್ಯಾಭಜನಾದಿಕರ್ತುಮ್ ।
ನಿಸರ್ಗಯಾ ತ್ವಂ ದಯಯೈವ ಪಾಹಿ
ಸದಾಶಿವೇಮಂ ಕರುಣಾಪಯೋಧೇ ॥ ೪೪ ॥

೪೪. ನಾನು ಇಂದ್ರಿಯಗಳನ್ನು ಗೆಲ್ಲಲು ಸಮರ್ಥನಲ್ಲ ; ಪೂಜಾ ಭಜನಾದಿಗಳನ್ನು ಮಾಡಲೂ ನಾನು ಸಮರ್ಥನಲ್ಲ. ಕರುಣಾಸಾಗರನಾದ ಸದಾಶಿವನೆ, ಸಹಜವಾದ ನಿನ್ನ ದಯೆಯಿಂದಲೇ ಈ ನನ್ನನ್ನು ಕಾಪಾಡುವವನಾಗು.

ಕೃತಯಾನಯಾ ನತಾವಲಿ -
ಕೋಟಿಗತೇನಾತಿಮನ್ದಬೋಧೇನ ।
ಮುದಮೇಹಿ ನಿತ್ಯತೃಪ್ತ -
ಪ್ರವರ ಸ್ತುತ್ಯಾ ಸದಾಶಿವಾಶ್ವಾಶು ॥ ೪೫ ॥

೪೫. ನಮಸ್ಕರಿಸುವ ಶಿಷ್ಯಕೋಟಿಯೊಳಗೆ ಸೇರಿದನವನೂ, ಅತ್ಯಂತ ಮೂಢನೂ ಆದ ನಾನು ಮಾಡಿರುವ ಈ ಸ್ತೋತ್ರದಿಂದ, ಎಲೈ ನಿತ್ಯತೃಪ್ತರಲ್ಲೆಲ್ಲ ಶ್ರೇಷ್ಠನಾದ ಸದಾಶಿವನೆ, ಬೇಗ ಸಂತೋಷಹೊಂದು ವನಾಗು, ಬೇಗ ಸಂತೋಷಹೊಂದುವನಾಗು.

ಇತಿ ಶ್ರೀಶೃಙ್ಗಗಿರಿ ಪೀಠಾಧೀಶ್ವರ
ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ
ಶ್ರೀಸಚ್ಚಿದಾನನ್ದಶಿವಾಭಿನವನೃಸಿಂಹಭಾರತೀಸ್ವಾಮಿಭಿರ್ವಿರಚಿತಾ
ಸದಾಶಿವೇನ್ದ್ರಸ್ತುತಿಃ

# ಸದಾಶಿವಪಞ್ಚರತ್ನ

(ಸದಾಶಿವೇಂದ್ರರ ಸಮಾಧಿದರ್ಶನ ಸಂದರ್ಭದಲ್ಲಿ ರಚಿಸಿದ್ದು)

**ಯತ್ಸಂದರ್ಶನ ಮಾತ್ರಾ**
**ದ್ಭಕ್ತಿರ್ಜಾತಾಪ್ಯವಿದ್ಧಕರ್ಣಸ್ಯ ।**
**ತತ್ಸಂದರ್ಶನಮಧುನಾ**
**ಕೃತ್ವಾ ನೂನಂ ಕೃತಾರ್ಥೋಽಸ್ಮಿ ॥ ೧ ॥**

೧. ಯಾವನ ಸಂದರ್ಶನಮಾತ್ರದಿಂದ ಕಿವಿಯನ್ನು ಚುಚ್ಚಿಕೊಳ್ಳದವನಿಗೂ[1] ಭಕ್ತಿಯುಂಟಾಯಿತೋ, ಆತನ ಸಂದರ್ಶನವನ್ನು ಮಾಡಿಕೊಂಡು ನಾನು ಈಗ ನಿಜವಾಗಿಯೂ ಕೃತಾರ್ಥನಾಗಿರುವೆನು.

**ಯೋಽನಿಶಮಾತ್ಮನ್ಯೇವ**
**ಹ್ಯಾತ್ಮಾನಂ ಸಂದಧದ್ವೀಥ್ಯಾಮ್ ।**
**ಭಸ್ಮಚ್ಛನ್ನಾನಲ ಇವ**
**ಜಡಾಕೃತಿಶ್ಚರತಿ ತಂ ನೌಮಿ ॥ ೨ ॥**

೨. ಯಾವಾತನು ಯಾವಾಗಲೂ ಪರಮಾತ್ಮನಲ್ಲಿಯೇ ಅಂತಃಕರಣವನ್ನು ಸೇರಿಸಿಕೊಂಡು ಬೀದಿಯಲ್ಲಿ ಬೂದಿಮುಚ್ಚಿದ ಕೆಂಡದಂತೆ ಜಡನ ಆಕಾರದಿಂದ ತಿರುಗುತ್ತಿದ್ದನೋ ಆತನನ್ನು ನಮಸ್ಕರಿಸುತ್ತೇನೆ.

**ಯಸ್ಯ ವಿಲೋಕನಮಾತ್ರಾ-**
**ಚ್ಚೇತಸಿ ಸಂಜಾಯತೇ ಶೀಘ್ರಮ್ ।**
**ವೈರಾಗ್ಯಮಚಲಮಖಿಲೇ -**
**ಷ್ವಪಿ ವಿಷಯೇಷು ಪ್ರಣೌಮಿ ತಂ ಯಮಿನಮ್ ॥ ೩ ॥**

೩. ಯಾವಾತನ ಕಟಾಕ್ಷಮಾತ್ರದಿಂದ ಬೇಗನೆ ಚಿತ್ತದಲ್ಲಿ ಸರ್ವವಿಷಯಗಳಲ್ಲಿಯೂ ವೈರಾಗ್ಯವು ಉಂಟಾಗುವದೋ ಆ ಯಮಿಯನ್ನು ನಮಸ್ಕರಿಸುತ್ತೇನೆ.

1. ಇದು ಒಬ್ಬ ಮುಸಲ್ಮಾನ ನವಾಬನ ಪರಾಮರ್ಶ, ಪೀಠಿಕೆಯನ್ನು ನೋಡಿ.

ಪುರತೋ ಭವತು ಕೃಪಾಬ್ಧಿಃ
ಪುರವೈರಿನಿವಿಷ್ಟಮಾನಸಃ ಸೋಽಯಮ್ ।
ಪರಮಶಿವೇನ್ದ್ರಕರಾಮ್ಬುಜ
ಸಂಜಾತೋ ಯಃ ಸದಾಶಿವೇನ್ದ್ರೋ ಮೇ ॥ ೪ ॥

೪. ಪರಮಶೀವೇಂದ್ರರ ಕರಕಮಲಸಂಜಾತರಾದ ಸದಾಶಿವೇಂದ್ರ ರೆಂಬ ತ್ರಿಪುರವೈರಿಯಾದ ಶಿವನಲ್ಲಿ ಪ್ರವಿಷ್ಟವಾದ ಮನಸ್ಸುಳ್ಳ ಕೃಪಾಸಾಗರ ರುಂಟಷ್ಟೆ, ಆ ಇವರು ನನಗೆ ಸಾಕ್ಷಾತ್ಕಾರವನ್ನು ಕೊಡಲಿ !

ಉನ್ಮತ್ತವತ್ಸಂಚರತೀಹ ಶಿಷ್ಯ-
ಸ್ತವೇತಿ ಲೋಕಸ್ಯ ವಚಾಂಸಿ ಶೃಣ್ವನ್ ।
ಖಿದ್ಯನ್ನುವಾಚಾಸ್ಯ ಗುರುಃ ಪುರಾಹೋ
ಹ್ಯುನ್ಮತ್ತತಾ ಮೇ ನ ಹಿ ತಾದೃಶೀತಿ ॥ ೫ ॥

೫. ಪೂರ್ವದಲ್ಲಿ 'ನಿಮ್ಮ ಶಿಷ್ಯನು ಹುಚ್ಚನಂತೆ ಅಲೆದಾಡುತ್ತಿರುವನು' ಎಂದು ಜನರ ಮಾತುಗಳನ್ನು ಕೇಳಿದ ಈತನ ಗುರುವು ''ಅಯ್ಯೋ ? ನನಗೆ ಅಂಥ ಹುಚ್ಚಿಲ್ಲವಲ್ಲ !'' ಎಂದನಂತೆ !

ಪಞ್ಚಕಮೇತದ್ ಭಕ್ತ್ಯಾ
ಶ್ಲೋಕಾನಾಂ ವಿರಚಿತಂ ಲೋಕೇ ।
ಯಃ ಪಠತಿ ಸೋಽಪಿ ಲಭತೇ
ಕರುಣಾಂ ಶೀಘ್ರಂ ಸದಾಶಿವೇನ್ದ್ರಸ್ಯ ॥ ೬ ॥

೬. ಭಕ್ತಿಯಿಂದ ವಿರಚಿತವಾಗಿರುವ ಈ ಸ್ತೋತ್ರಪಂಚಕವನ್ನು ಲೋಕದಲ್ಲಿ ಯಾವನು ಪಠಿಸುವನೋ ಅವನಿಗೆ ಬೇಗನೆ ಸದಾಶಿವೇಂದ್ರನ ಕೃಪೆಯು ದೊರಕುವದು.

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ
ಶ್ರೀ ಜಗದ್ಗುರು ಶ್ರೀಸಚ್ಚಿದಾನನ್ದಶಿವಾಭಿನವ
ನೃಸಿಂಹಭಾರತೀಸ್ವಾಮಿಭಿರ್ವಿರಚಿತಂ
ಸದಾಶಿವಪಞ್ಚರತ್ನಮ್

**ಈ ಕಾರ್ಯಾಲಯದಿಂದ ತಾವು ಯಾವ ಯಾವ ಲಾಭವನ್ನುಪಡೆಯಬಹುದು ?**

1. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣಶ್ರವಣ, ಉಪನ್ಯಾಸಗಳು, ಅನುಷ್ಠಾನಗಳು, ವೇದಾಂತಸಪ್ತಾಹ, ವೇದಾಂತ ಶಿಬಿರ - ಇವುಗಳಲ್ಲಿ ಯಥಾಶಕ್ತಿಯಾಗಿ ಭಾಗವಹಿಸಬಹುದು.
2. ಇಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.
3. ಕಾರ್ಯಾಲಯದಿಂದ ಪ್ರಕಟವಾಗುವ **ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ** ಮತ್ತು ಬೆಂಗಳೂರು ಶಾಖಾಕಾರ್ಯಾಲಯದಿಂದ ಹೊರಡುವ **ಶಂಕರ ಭಾಸ್ಕರ ತ್ರೈಮಾಸಿಕಪತ್ರಿಕೆಗೆ** ಚಂದಾದಾರರಾಗಿ ಬಗೆಬಗೆಯ ಅಧ್ಯಾತ್ಮ ಬೋಧನೆಯನ್ನು ಪಡೆಯಬಹುದು. ಚಂದಾದಾರರು ಕೊಂಡುಕೊಳ್ಳುವ ಪುಸ್ತಕಗಳಿಗೆ ರಿಯಾಯಿತಿ ದೊರಕುವದು.
4. ಸತತವಾಗಿ ಕಾರ್ಯಾಲಯದಿಂದ ಮುದ್ರಣ/ಮರುಮುದ್ರಣವಾಗುತ್ತಿರುವ ಗ್ರಂಥಗಳಿಗೆ ಯಥಾಶಕ್ತಿಯಾಗಿ ಧನಸಹಾಯವನ್ನು ನೀಡಿ ಅಧ್ಯಾತ್ಮ ಪ್ರೇಮಿಗಳಿಗೆ ಸುಲಭದರದಲ್ಲಿ ಪುಸ್ತಕಗಳು ದೊರೆಯುವಂತೆ ಮಾಡಿ, ಪುಣ್ಯವನ್ನೂ, ಕೀರ್ತಿಯನ್ನೂ -ಸಂಪಾದಿಸಿಕೊಳ್ಳಬಹುದು. ಈ ಪುಸ್ತಕಗಳ ಗ್ರಂಥ ಭಂಡಾರವನ್ನು ಏರ್ಪಡಿಸಿಕೊಳ್ಳಬಹುದು.
5. ಕಾರ್ಯಾಲಯದಲ್ಲಿರುವ ವಿದ್ಯಾಲಯಕ್ಕೆ ಯೋಗ್ಯರಾದ ವಿದ್ಯಾರ್ಥಿಗಳನ್ನು ಕಳುಹಿಸಿ **ಅಧ್ಯಾತ್ಮವಿದ್ಯೆ** (ವೇದಾಂತ)ಯಲ್ಲಿ ಪ್ರವೀಣರನ್ನಾಗಿ ಮಾಡಿಸಿ ಅವರಿಂದ ನಿಮ್ಮ ಪ್ರಾಂತ್ಯದಲ್ಲಿ **ಬ್ರಹ್ಮವಿದ್ಯಾ** ಪ್ರಚಾರವನ್ನು ಮಾಡಿಸಬಹುದು.
6. ಗುರುಕುಲಪದ್ಧತಿಯಂತೆ ನಡೆಯುತ್ತಿರುವ ವಿದ್ಯಾಲಯದ **ವಿದ್ಯಾರ್ಥಿಗಳ ಶಾಶ್ವತ ಭೋಜನವ್ಯವಸ್ಥೆಗೆ** 5000ರೂ.ಗಳ ಮೂಲಧನ ನೀಡಿ ಬರುವ ಬಡ್ಡಿಯಿಂದ ವರ್ಷದಲ್ಲಿ ಒಂದು ದಿನ ತಮ್ಮ ಅಥವಾ ತಮ್ಮ ಮಾತಾಪಿತೃಗಳ ಹೆಸರಲ್ಲಿ **ಹಸ್ತೋದಕಸೇವೆ**ಯಲ್ಲಿ ಭಾಗವಹಿಸಿ **ಅನ್ನದಾನ, ವಿದ್ಯಾದಾನ**ದಲ್ಲಿ ಪುಣ್ಯ ಭಾಗಿಗಳಾಗಬಹುದು.
7. ಗ್ರಂಥಭಂಡಾರ, ಉಚಿತವಾಚನಾಲಯಗಳನ್ನು ಉಪಯೋಗಿಸಿಕೊಂಡು, ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳಬಹುದು.
8. ಕಾರ್ಯಾಲಯದ ಕಟ್ಟಡ, ವಿದ್ಯಾಲಯ, ಪೂಜಾಮಂದಿರ ಗುರುಮಂದಿರ, ಪುಸ್ತಕ ಭಂಡಾರ, ವಿದ್ಯಾರ್ಥಿಗಳಿಗೆ ಭೋಜನ ವ್ಯವಸ್ಥೆ, ವೇದಾಂತ ಸಪ್ತಾಹ, ವೇದಾಂತ ಶಿಬಿರ- ಗಳಿಗೆ ಯಥೋಚಿತವಾಗಿ ಸಹಾಯ ಮಾಡಿ ಪುಣ್ಯವನ್ನು ಗಳಿಸಿಕೊಳ್ಳಬಹುದು.

**80G ರಿಯಾಯಿತಿ ಸೌಲಭ್ಯವನ್ನೂ ಪಡೆಯಬಹುದು.**

## ಹೊಸದಾಗಿ ವೇದಾಂತವಿಚಾರವನ್ನು ಆರಂಭಿಸುವ ಮುಮುಕ್ಷುಗಳು ಮೊದಲು ಓದಬೇಕಾಗಿರುವ ಗ್ರಂಥಗಳು

| | | ಪುಟಗಳು |
|---|---|---|
| 1. | **ಅಧ್ಯಾತ್ಮವೆಂದರೇನು ?** (ಅಧ್ಯಾತ್ಮ – ಎಂಬ ಮಾತಿನ ವಿವರಣೆ) | (26) |
| 2. | **ರಸನಿಮಿಷಗಳು** (ಆನಂದಜೀವನಕ್ಕೆ ಅವಶ್ಯವಾದ ಸೂಕ್ತಿಗಳು) | (52) |
| 3. | **ಶಂಕರಮಹಾಮನನ** (ಶಂಕರವೇದಾಂತದ ಕಿರುಪರಿಚಯ) | (30) |
| 4. | **ಆತ್ಮಬೋಧ** (ಭಾವಾರ್ಥದೊಡನೆ) | (32) |
| 5. | **ಉಪನಿಷತ್ತುಗಳ ಮೊದಲನೆಯ ಪರಿಚಯ** –(ಕಥಾ ಸಮೇತ) | (60) |
| 6. | **ವೇದಾಂತಬಾಲಬೋಧೆ** (ಪ್ರಾತಃಸ್ಮರಣ ಸ್ತೋತ್ರವ್ಯಾಖ್ಯಾನ) | (48) |
| 7. | **ವೇದಾಂತಪ್ರವೇಶಿಕೆ** ('ಅದ್ವೈತ ಪಂಚರತ್ನ'–ಸ್ತೋತ್ರದ ವ್ಯಾಖ್ಯಾನ) | (74) |
| 8. | **ಆತ್ಮಪ್ರತಿಬೋಧ** (ಕೇನೋಪನಿಷತ್ತನ್ನು ಕುರಿತ ಪ್ರಬಂಧ) | (48) |
| 9. | **ವೇದಾಂತಕಥಾವಳಿ** (ತತ್ತ್ವವಿಚಾರಸಹಿತವಾದ 21 ಕಥೆಗಳು) | (60) |
| 10. | **ವಿಲಕ್ಷಣಮೌನಿ** (ಹತ್ತುಉಪನಿಷತ್ತುಗಳ ತಾತ್ಪರ್ಯ) | (24) |
| 11. | **ಸಮುದ್ರಮಥನ** (ಪೌರಾಣಿಕ ಕಥೆ;ರಹಸ್ಯಾರ್ಥದೊಡನೆ) | (68) |
| 12. | **ಮೋಹಮುದ್ಗರ** (ಭಜಗೋವಿಂದ ಸ್ತೋತ್ರ; ಭಾವಾರ್ಥದೊಡನೆ) | (16) |
| 13. | **ಮೂಲರಾಮಾಯಣ** (ಶ್ರೀಮದ್ರಾಮಾಯಣದ 1ನೆಯ ಸರ್ಗ, ಸಾರ್ಥ) | (26) |
| 14. | **ಸರ್ವೇಷ್ಟ ಸಿದ್ಧಿ** (ಎಲ್ಲಾ ಕೋರಿಕೆಗಳೂ ನೆರವೇರುವ ಬಗೆ) | (48) |
| 15. | **ಭಗವದ್ಗೀತೆಯ ಸಾರ ಮತ್ತು ಪ್ರಧಾನೋಪದೇಶಗಳು** | (66) |
| 16. | **ಸದ್ಗುರುವಿನ ಅನುಗ್ರಹ** (ಒಂದು ಚಿಕ್ಕ ಪ್ರಬಂಧ) | (24) |
| 17. | **ಅಧ್ಯಾತ್ಮ ಶಂಕರವಿಜಯ** (ಶಂಕರರ ಜೀವನ ಚರಿತ್ರೆ) | (188) |
| 18. | **ಸ್ತುತಿಪುಷ್ಪಾಂಜಲಿ** (ಭಕ್ತರೆಲ್ಲರೂ ಅದರಲ್ಲೂ ಮಕ್ಕಳು ಕಂಠಪಾಠ ಮಾಡಲು ಯೋಗ್ಯವಾದ ಶ್ಲೋಕಗಳು – ಪ್ರತಿಪದಾರ್ಥ ಸಹಿತ) | (72) |
| 19. | **ಅಧ್ಯಾತ್ಮ ಶಾಸ್ತ್ರ ಪರಿಭಾಷೆ** (ಪಾರಿಭಾಷಿಕಶಬ್ದಗಳ ವಿವರಣೆ) | (30) |